
ಕೊರವಂಜಿ



ಮಾರ್ಚಿ

೧೯೬೫

KORAVANJI

Kannada Monthl

ಸಂಪಾದಕರು :

ಶ್ರೀ॥ ರಾ. ಶಿ

ಬರಹಗಾರರು :

ಶ್ರೀ॥ ಅ. ರಾ. ಸೇ

ಶ್ರೀ॥ ಟಿ. ಎಸ್. ನರಹರಿ

ಶ್ರೀ॥ ಕೆ. ಎಸ್. ಕಿಟ್ಟನ್

ಶ್ರೀ॥ [illegible]

ಶ್ರೀಮತಿ॥ ಟಿ. ಸುನಂದ

ಶ್ರೀ॥ ಕೊಕ್ಕಗಾಲಯ್ಯಾ

ರಾಮಾನುಜ

ಶ್ರೀ॥ ಬಾಲರಾಘ ದೀಕ್ಷಿತ್

ಇತ್ಯಾದಿ, ಇತ್ಯಾದಿ

೨೫ ಪೈ

ತಿಳಿನಗೆಯ ಮಾಸಪತ್ರಿಕೆ


For 3 way Beauty Treatment....
RAJA
SNOW
AMLA HAIR OIL , KASTURI SOAP
MANYAM & CO. BANGALORE MADRAS MADURAI BOMBAY

ಕೊರವಂಜಿ

ಸಂಪುಟ ೨೪] ಮಾರ್ಚಿ ೧೯೬೫ [ಸಂಚಿಕೆ ೧೨

(ಕುಹಕಿಡಿಗಳು)

ನಂದಾಜಿಯವರ ಕಚೇರಿಯಿಂದ ಕಳಿಸಲ್ಪಟ್ಟ ಹಲವಾರು ಹಿಂದಿ ಸರ್ಕ್ಯುಲರ್ ಗಳು ಈಗ ಹಿಂದೇಟು ಹೊಡೆದಿವೆಯಂತೆ :—

* * * *

ಹಾಳು ಅಗಸರವನು ಗುಂಡಿ ಕಿತ್ತು ಪರಟನ್ನು ತರ್ತಾನೆ, ಅಂದ್ರೆ—ಅದಕ್ಕೇ ನಾನೇ ಗುಂಡಿ ಕಿತ್ತು, ಅಗಸನಿಗೆ ಒಗೆಯಕ್ಕೆ ಹಾಕ್ತೀನಿ ಎಂದು ಮಿಟಕಲಾಡಿ ಮೀನಾಕ್ಷಿ ಗಂಡನಿಗೆ ಹೇಳಿದಳಂತೆ.

* * *

ಅಖಿಲ ಭಾರತ "ಸರ್ವಿಸ್"ಗಳಿಗೆ ಇನ್ನುಮೇಲೆ ರಾಜ್ಯಕ್ಕಿಷ್ಟು ಅಂತ ನಿಗದಿ ಮಾಡುವುದರಿಂದ, ಯೋಗ್ಯತೆಗೆ ಧಕ್ಕೆ ಬರುವುದಿಲ್ಲವೇ ? ಎಂದೊಬ್ಬರು ಅಂಬೋಣ.

—ಆಳುವ ನಾಯಕರಲ್ಲೇ ಯೋಗ್ಯತೆ ಹುಡುಕುಲ್ಲ, ಅಂದಮೇಲೆ ಅಧಿಕಾರಿಗಳಲ್ಲಿ ಮಾತ್ರ ಯಾಕೆ ?

* * * *

ಅಧಿಕಾರೀ ಭಾಷೆಯ ಗೊಂದಲವನ್ನು ಕಂಡಮೇಲೆ, ನಮ್ಮ ನಾಯಕರನ್ನು, ಲುಮುಂಬಾ, ಟೋಷಾಂಬೆ, ಕಸವುಬು ಅಂತ ಕರೆಯುವುದು ಲೇಸು !

* * * *

ರಾಜ್ಯದ ಮುಖ್ಯ ಮಂತ್ರಿಗಳೆಲ್ಲಾ ಡಿಲ್ಲಿಯಲ್ಲಿ ಸಭೆ ಸೇರಿ ಶಾಸ್ತ್ರಿಗಳ ಪೌರೋಹಿತ್ಯದಲ್ಲಿ, ಸಾಮೂಹಿಕ ಭಜನೆ ಮಾಡಿದರಂತೆ.

—"ಹಿಂದಿಯ ಬಿಡಬೇಡ, ತಮ್ಮಾ! ತಂಟೆಗೆ ಸಿಗಬೇಡ!" ಅಂತ.

ಇನ್ನು ಮುಂದೆ ಸಿ. ಬಿ. ಐ. ಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ರಾಜ್ಯಕ್ಕೆ ಇಷ್ಟು ಅಂತ ಲೆಕ್ಕ ಹಾಕಿ ಆಯ್ಕೆ ಮಾಡುತ್ತಾರಂತೆ. ಜಾಣತನದ ಹುಕುಂ—

—ನಮ್ಮ ರಾಜ್ಯದಿಂದ ಆಯ್ಕೆಯಾದ ಸಿ. ಬಿ. ಐ. ನಮ್ಮ ಸಚಿವರನ್ನು ಆಮೇಲೆ ಬಿಟ್ಟುಕೊಡ್ತಾನೆಯೇ ?

* * * *

ಮೃಗಾಲಯದಲ್ಲಿ ಹಯ್ನು ಹಿಂದೀಲಿ ನಗ್ತು ಅಂತ ಮೊಸಳೆ ಕಣ್ಣೀರು ಸುರಿಸಿತಂತೆ.

* * * *

ಆಸ್ಪತ್ರೆಯೊಂದರಲ್ಲಿ ಹಿಂದಿ ಭಾಷೆಯಲ್ಲಿ ಔಷಧಿ ಚೀಟಿಗಳನ್ನು ಡಾಕ್ಟರು ಬರೆದರಂತೆ.

—ಹಿಂದಿ ಬಾರದ ನರ್ಸುಗಳಿಗೆ, ಕಾಂಪೌಂಡರುಗಳಿಗೆ ಇದರಿಂದ ತೊಂದರೆ ಯೇನೂ ಆಗಲಿಲ್ಲವಂತೆ ! !

* * * *

ಮೊನ್ನೆ ಜನಪ್ರಿಯ ನಾಯಕರು ಹಿಂದಿಯಲ್ಲಿ ಭಾಷಣ ಮಾಡಲಿಕ್ಕೆ ಬಂದಾಗ, ಕೆಲವೇ ಜನರು ಸಭೆಗೆ ಬಂದಿದ್ದರು—

—ಆದರೆ ಪೋಲೀಸಿನವರು ಗುಂಪು ಕೂಡಿಕೊಂಡು, ಇದ್ದವರನ್ನು ಸುತ್ತುಗಟ್ಟಿ ಚೆದುರದಂತೆ ಮುಂಜಾಗ್ರತೆ ವಹಿಸಿದರು.

* * * *

ಹೊಟ್ಟೆಗೆ ಸಾಕಷ್ಟು ಹಿಟ್ಟಿಲ್ಲ, ನಮ್ಮವರಿಗೆ,

ಆದರೆ ಜುಟ್ಟು ಕುಣಿಸಿ ಬೈಯಲು, ಭಾಷಾಮಲ್ಲಿಗೆ ಬೇಕು !

* * * *

ಹಿಂದೀ ಇಂಗ್ಲೀಷ್ ಜಗಳದಲ್ಲಿ ಕಂಭ, ಕಟ್ಟಡಗಳು ಬಡವಾದವು.

* * * *

ಹಿತ್ತಲ ಗಿಡ ಮದ್ದಲ್ಲ.

ಹಿಂದಿ ಬುಡ ಭದ್ರವಿಲ್ಲ.

* * * *

ಬಲು ರೂಪವಂತ, ಬಲು ಗುಣವಂತ. ಬಲು ಹಣವಂತ, ಇಷ್ಟೂ ಆದ ಅಳಿಯ ಲೋಕದಲ್ಲಿ ದುರ್ಲಭ—

—ದಿಟ; ಆದರೆ ಒಬ್ಬೊಬ್ಬ ಅತ್ತೆಯೂ ಅಂತಹ ಅಳಿಯನನ್ನು ಪಡೆಯುತ್ತಾಳೆ

ವಜ್ರ ಭಸವಮ್

ಮೊನ್ನೆ ರಾಮಣ್ಣ ದಿಳ್ಳೀಗೆ ಹೋಗಿದ್ದನಲ್ಲಾ ! ಲೈಸೆನ್ಸ್ ತೆಗೆದುಕೊಂಡು ಬರುಕ್ಕೆ, ಆಗ ಅಲ್ಲಿ ಕಂಡ ವಿಷಯಾನ ಇಲ್ಲಿಗೆ ಬಂದು ಹೇಳಿದಾಗ ನನಗನಕ ನಂಬುಕ್ಕೇ ಆಗಲಿಲ್ಲ. ಆದರೆ ಕಟ್ಟುಕತೆಗಿಂತ ಸತ್ಯ ವಿಚಿತ್ರವಾಗಿರುತ್ತೆ ಅಲ್ಲವೇ ?

ವಿಷಯ ಇಷ್ಟೇ ! ಕಟ್ಟಡ ಇಲಾಖೆಯ ಇಂಜಿನಿಯರು ನೂರು ಟನ್ ಸಿಮೆಂಟ್ ಬೇಕು ಎಂದು ಮೇಲಧಿಕಾರಿಗಳಿಗೆ ಬರೆದರಂತೆ.

ಜನವರಿ ೨೬ ಆಯಿತು, ಆದುದರಿಂದ ನಿಮ್ಮ ಕೇಳಿಕೆಯನ್ನು ಹಿಂದಿಯಲ್ಲಿ ಬರೆದು ಕಳಿಸಿ ಎಂದು ಮೇಲಧಿಕಾರಿಗಳು ಕಾಗದವನ್ನು ಹಿಂತಿರುಗಿ ಇಂಜಿನಿಯರಿಗೆ ಕಳಿಸಿದರಂತೆ.

ಇಂಜಿನಿಯರು ಕನ್ನಡಿಗರು. ಹಿಂದಿ ಬರದು. ಏನು ಮಾಡಬೇಕು ? ಕೇಂದ್ರ ಸರ್ಕಾರದ ತರ್ಜುಮೆ ಭಾಗಕ್ಕೆ ತಾವೇ ಹೋಗಿ ನೂರು ಟನ್ ಸಿಮೆಂಟ್ ಅನ್ನು ಹಿಂದಿಯಲ್ಲಿ ಹೇಗೆ ಬರೆಯುವುದು ಎಂದು ಕೇಳಿದರಂತೆ. ಅಲ್ಲಿದ್ದ ಉಭಯ ಭಾಷಾ ಪ್ರವೀಣರು ಬಹಳ ಬುದ್ಧಿ ಉಪಯೋಗಿಸಿ, ಹಲವಾರು ನಿಘಂಟುಗಳನ್ನು ನೋಡಿ, ಕಡೆಗೆ "ಸೌ ಟಾಣಿ ವಜ್ರ ಭಸವಮ್" ಎಂದು ಉತ್ತರಿಸಿದರಂತೆ.

ಹಿಂದಿಯಲ್ಲಿ ಈ ಜಾಹಿರಾತನ್ನು "ಸೌಟಾಣಿ ವಜ್ರ ಭಸವಮ್ ಹೋನಾ" ಎಂದು ಇಂಜಿನಿಯರು ಪ್ರಕಟಿಸಿದರು. ವಜ್ರ ಭಸವಮ್ ಅಂದರೆ ಯಾವುದೋ ಆಯುರ್ವೇದದ ಅಮೂಲ್ಯ ಔಷಧಿ ಇರಬೇಕು ಎಂದುಕೊಂಡು, ಸಿಮೆಂಟ್ ಅಂಗಡಿ ಯವರ್‍ಯಾರೂ ಈ ಜಾಹಿರಾತಿಗೆ ಉತ್ತರ ನೀಡಲೇ ಇಲ್ಲ.

ಹೀಗಾಯ್ತು ಎಂದು ಇಂಜಿನಿಯರು ಮೇಲಧಿಕಾರಿಗಳಿಗೆ ಬರೆದರಂತೆ. ಅವರು ಸರಬರಾಜು ಇಲಾಖೆಗೆ ಈ ಬೇಡಿಕೆಯನ್ನು ಕಳಿಸಿದರಂತೆ. ಆ ಇಲಾಖೆಯವರು "ವಜ್ರ ಭಸವಮ್" ಭಾರತದಲ್ಲಿ ಸಿಗುಲ್ಲ, ಪಾಶ್ಚಾತ್ಯ ದೇಶಗಳಿಂದ ಆಮದು ಮಾಡಿ ಕೊಳ್ಳಬೇಕು. ಆದುದರಿಂದ ಯೋಜನಾ ಆಯೋಗಕ್ಕೆ ಬರೆದು, ಅವರಿಂದ ಅಸ್ತು ಅನ್ನಿಸಿಕೊಂಡು, ಆಮೇಲೆ ರಿಸರ್ವ್ ಬ್ಯಾಂಕಿಗೆ ಬರೆದು ಅವರಿಂದ ವಿದೇಶಿ ವಿನಿಮಯ ಪಡೆದು, ಅನಂತರ ವಿಲಾಯ್ತಿಯಲ್ಲಿ ಈ ಜಾಹಿರಾತನ್ನು ಮಾಡಬೇಕು. ಆದರೆ ಅಲ್ಲಿ ಇಂಗ್ಲೀಷಿನಲ್ಲಿ ಜಾಹಿರಾತಿಸಬೇಕು ಎಂದು ಹೇಳಿದರಂತೆ.

ಇಷ್ಟೆಲ್ಲಾ ಆಗುವ ಹೊತ್ತಿಗೆ ಒಂದು ವರ್ಷ ಆಗಿತ್ತು. ಇಂಗ್ಲೀಷಿನಲ್ಲಿ ಜಾಹಿ ರಾತನ್ನು ತರ್ಜುಮಿಸಿದಾಗ, ಅರೆ ಭಗವಂತ! ಸಿಮೆಂಟ್ ನಮ್ಮೂರಲ್ಲಿ ಸಿಗುಲ್ಲವೇ ಅಂತ ತಲೆ ಕೆರೆದುಕೊಂಡರಂತೆ.

ಹಿಂದಿ—ನುಂದಿ ಗಾದೆಗಳು

ಹಿಂದೀ ದೇವರಿಗೆ " ನಂದಾ" ದೀಪ.

* * * *

ಹಿಂದಿ ಹಳ್ಳಕ್ಕೆ ಎಳೆದರೆ, ನಂದಾ ನೀರಿಗೆ ಬಿದ್ದ.

* * * *

ಒಂದಲ್ಲಾ ಮಗಳಿಗೆ, ಹಿಂದೀ ಬೇರೆ ಕಲೀಬೇಕು.

* * * *

ಗಣರಾಜ್ಯದ ದಿವಸ ಹಿಂದಿ ಗಂಟೆ ಬಾರಿಸಿದರೆ,
ಗೋಪುರವೇ ಕಳಚಿಕೊಂಡಿತಂತೆ.

* * * *

ಇರುಳಲ್ಲಿ ಕಂಡ ಹಿಂದಿ ಭಾವೀಲಿ
ಹಗಲಲ್ಲೇ ಹೋಗಿ ಬಿದ್ದರಂತೆ

* * * *

ಹಿಂದಿ ಈಯಿತು ಅಂದರೆ ಸರ್ಕಾರಕ್ಕೆ ಕಟ್ಟೆ ಎಂದರಂತೆ.

* * * *

ಹಿಂದಿಯ ಕಾವು, ಹಿಂದಿಗೇ ಮೃತ್ಯು.

* * * *

ಪಟ್ಟೆ ಸೀರೆ ಬರುತ್ತೆ ಅಂತ ಹಿಂದಿ,
ಉಟ್ಟ ಸೀರೆ ಸುಟ್ಟಳಂತೆ.

* * * *

ನುಂಗಿದ್ದೇ ಹಿಂದಿ—ಮಿಂದದ್ದೇ ಗಂಗೆ

* * * *

ಸಂಸ್ಕೃತದ ಬೆನ್ನನ್ನ ಹಿಂದಿ ಏರಿತು,
ಸಂಸ್ಕೃತಿಯ ಪ್ರಾಯವನ್ನು ಇಂಗ್ಲೀಷ್ ಹತ್ತಿತು.

* * * *

ಬಡಭಾರತೀಯನಿಗೆ, ಇಜ್ಜೋಡಿ ಭಾಷೆ

* * * *

ಭಾಷಾ ದಾಸರನ್ನು ನಂಬಿ, ಅರಿಯದ ದಾಸ ಕೆಟ್ಟ

* * * *

ಹೆಂಡತಿ ಹಿಂಡಿ ನುಡಿದರೆ—ಗಂಡ ಮೂಳನಾಯಿ

* * * *

ಊದಿದಷ್ಟೂ ಹಿಂದಿ ಬೂದಿ ಆಯಿತು.

ಹಿಂದೆ ಬಿದ್ದ ಹಿಂದಿ

ಮೊದಲಿಂದ ಗೊತ್ತಿತ್ತು ಮೈಲಾರಯ್ಯನಿಗೆ — ಎಂದಿದ್ದರೂ ಈ ಪೆಟ್ಟು ತಲೆಯ ಮೇಲೆ ಬೀಳುವುದೇ, ಎಂದು! ಅದಕ್ಕೇ ಮುಂದಾಲೋಚನೆ ಮಾಡಿ, ಹತ್ತು ವರ್ಷದ ಹಿಂದೆಯೇ ಹಿಂದೀ–ಕನ್ನಡೀ ಸ್ವಯಂಬೋಧಿನೀ, ಸರಳಹಿಂದೀ, ಪಹಲೀ ಕಿತಾಬ್, ಆಸಾನೀ ಬಾಲಪಾರ್, ಇತ್ಯಾದಿ ಪುಸ್ತಕಗಳನ್ನು ಶೇಖರಿಸಿದ್ದ. ಕಛೇರಿ ಯಿಂದ ಮನೆಗೆ ಬಂದು, ಕಾಫಿ ಕುಡಿದು, ಗಾಳಿ ಸೇವನೆಮಾಡಿ, ಬಿಸಿ ಸಾರನ್ನ ಉಂಡು, ಪುಸ್ತಕ ಹಿಡಿದು ಆರಾಮುಕುರ್ಚಿಯಲ್ಲಿ ಮಂಡಿಸುತ್ತಿದ್ದ—ಮುಂದಿನ ರಾಷ್ಟ್ರಭಾಷೆ ಯನ್ನು ಉಂಡು ಅರಗಿಸಿಕೊಳ್ಳಲೇಬೇಕೆನ್ನುವ ದೃಢನಿಶ್ಚಯದಿಂದ! ಆದರೆ 'ಅ' ಕಾರ ದಿಂದ (ಅಂದರೆ–ಅಬ್, ಅಗ್ಲಾ...) ಶುರುವಾದ ಪಾಠ 'ಆ'ಕಾರಕ್ಕೆ (ಅಂದರೆ–ಆಜ್, ಆಮ್, ಆದತ್...)ಬರುವ ಹೊತ್ತಿಗೆ ಆಕಳಿಕೆ ಆರಂಭವಾಗಿ, ಸರಸು ಅವನನ್ನು ಸುಲಭಾಸನದಿಂದ ಕಷ್ಟಪಟ್ಟು ಎಬ್ಬಿಸಿ, ಹಾಸಿಗೆಯ ಬಳಿ ಬಿಡಬೇಕಾಗುತ್ತಿತ್ತು. ಹೀಗಾಗಿ ಮನೇ ಪಾಠ "ಮೈ ಹೂಂ, ತುಂ ಹೋ, ವಹ್ ಹೈ" ಮಟ್ಟಕ್ಕೇ ಮುಕ್ತಾಯವಾಯಿತು.

"ನಿಮ್ಮ ಪಾಡಿಗೆ ನೀವೇ ಕಲಿಯುವುದಕ್ಕೆ ಹೋದರೆ ಆಗುವುದೇ ಹೀಗೆ! ಸಂಜೆಹೊತ್ತು ಹಿಂದಿನ ಬೀದೀಲಿರೋ ಯುವಕ ಸಂಘದಲ್ಲಿ ಹಿಂದೀ ಕ್ಲಾಸು ನಡೆಯು ತ್ತಲ್ಲ—ಸೇರಿಕೊಳ್ಳಿ"—ಉಪದೇಶಿಸಿದಳು ಸರಸು. ಸಲಹೆ ಸೂಕ್ತವಾದದ್ದೆಂದು ಅನು ಮೋದಿಸಿದ ಮೈಲಾರಯ್ಯ ಯುವಕ ಸಂಘದ ವಿದ್ಯಾರ್ಥಿಯಾದ. ಮೊದಲು ಮೊದ ಲಿಗೆ, ಮುಂದಿನ ಸಾಲಿನ ಬೆಂಚಿನಲ್ಲಿ ಕೂತು, ಮನವಿಟ್ಟು ಪಾಠಕ್ಕೆ ಕಿವಿಕೊಟ್ಟ; ಗಾಯ್–ಹಸು, ದೂಧ್–ಹಾಲು, ಪೇಡ್–ಮರ, ಫೂಲ್–ಹೂವು, ಎಂದು ಬರೆದು ಕೊಂಡ. ನಂತರ, ದಿನಕ್ಕೆ ಒಂದೊಂದರಂತೆ ಹಿಂದಿನ ಬೆಂಚಿಗೆ ಸರಿದು, ಕಡೆಗೆ ಕಡೇ ಬೆಂಚಿನಲ್ಲಿ ಕೂತು 'ಹುಲಿ-ಕುರಿ' ಆಡಿದ-ಸಹವಿದ್ಯಾರ್ಥಿಗಳೊಂದಿಗೆ!

"ಈ ವಯಸ್ನಲ್ಲಿ ನಿಮಗೆ ವಿದ್ಯೆ ತಲೆಗೆ ಹತ್ತುತ್ತೇ? ಓದೋ ಕಾಲದಲ್ಲೇ ಒಂದೊಂದು ಪರೀಕ್ಷೇಲೂ ರಾಬರ್ಟ್ ಬ್ರೂಸನ ರಿಕಾರ್ಡನ್ನ ಮುರಿದಿದ್ದೋರು— ಇನ್ನೀಗ ಕ್ಲಾಸಿನಲ್ಲಿ ಕೂರಿಸಿ ತಲೆಗೆ ತುರುಕುವುದಕ್ಕೆ ಯಾವ ಅಧ್ಯಾಪಕನಿಗೆ ತಾನೇ ಸಾಧ್ಯ?...ಒಂದು ಕೆಲಸಮಾಡಿ, ಹಿಂದೀ ಸಿನಿಮಾಗಳನ್ನ ನೋಡಿ! ಕೇಳಿ ಕೇಳೀ ಭಾಷೆ ಬಂದುಬಿಡುತ್ತೆ! ಈಗ ನೋಡಿ. ನಮ್ಮ ನಾಣಿ—ಸಿನಿಮಾ ನೋಡೇ ಮಾತು ಕಲಿತುಬಿಟ್ಟಿರೋದು!"—ಸರಸುವಿನ ಮುಂದಿನ ಸಲಹೆ ಇದು.

ವಾರಕ್ಕೆರಡರಂತೆ ಮೈಲಾರಯ್ಯ ಮೂರು ತಿಂಗಳ ಕಾಲ ಹಿಂದೀ ಸಿನಿಮಾ ನೋಡಿದ, ಎಲ್ಲರೂ ನಕ್ಕಾಗ ತಾನೂ ನಕ್ಕ, ಎಲ್ಲರೂ ಕಣ್ಣೊರೆಸಿದಾಗ ತಾನೂ ಕಣ್ಣೊರೆಸಿಕೊಂಡ, ಎಲ್ಲರೂ ಚಪ್ಪಾಳೆ ತಟ್ಟಿದಾಗ ತಾನೂ ಚಪ್ಪಾಳೆ ತಟ್ಟಿದ!...ಪರಿಣಾಮವೆಂದರೆ, ಮೂರು ತಿಂಗಳ ಕೊನೆಯಲ್ಲಿ "ಮೊಹಬ್ಬತ್, ಇಶ್ಕ್, ಪ್ಯಾರ್"—ಇವು ಮೂರು, ಅವನ ಮೆದುಳಿನಲ್ಲಿ ಉಳಿದುಕೊಂಡ ಶಬ್ದಗಳು; ಸರಸುವಿಗೆ ಇಪ್ಪತ್ತೆರಡು ಚಿತ್ರಗಳನ್ನು ಸರಾಗವಾಗಿ ನೋಡುವ ಸದವಕಾಶ!

ಅವನಿಗೆ ಬಗೆ ಹರಿಯದ ಒಂದೇ ಆಶ್ಚರ್ಯವೆಂದರೆ—ಸರಸುವಿನ ಚುರುಕು ಬುದ್ಧಿ! ಸಮಾಜದಲ್ಲಿ ಹಿಂದೀ ಕ್ಲಾಸಿಗೆ ಸೇರಿ, ಪ್ರಾಥಮಿಕ, ಮಾಧ್ಯಮಿಕ, ಪ್ರವೇಶಿಕ, ಎನ್ನುತ್ತ ಒಂದೊಂದಾಗಿ ಪರೀಕ್ಷೆಗಳನ್ನು ಪಾಸು ಮಾಡಿಯೇ ಬಿಟ್ಟಳು! ಅವಕಾಶ ಸಿಕ್ಕಿದರೆ ಸಾಕು. ಅನಾಥಾಶ್ರಮ್‌ನ ಅನಾಥನೊಬ್ಬ "ಧರಮ್ ದೋ ಮಾತಾಜೀ" ಎಂದು ಬರುವುದೇ ಸಾಕು—ಮಡಕೆಯೊಳಗೆ ಕಲ್ಲು ಹಾಕಿ ಅಲ್ಲಾಡಿಸಿದಂತೆ ಸರಸರನೆ ಹಿಂದಿಯಲ್ಲಿ ಮಾತಾಡಿ, ಅವನನ್ನು ಅಟ್ಟಿಯೇ ಬಿಡುತ್ತಿದ್ದಳು. ಪುಣ್ಯ ಸಂಪಾದನೆಗೆಂದು ತನ್ನನ್ನೂ ಹೊರಡಿಸಿಕೊಂಡು ಬ್ರಹ್ಮಾನಂದ ಟ್ಯೂರಿಶ್ಟ್ ಸರ್ವೀಸಿನಲ್ಲಿ ಬದರಿ, ಕಾಶಿ, ಪ್ರಯಾಗ. ಗಯಾ ಪವಿತ್ರಾಕ್ಷೇತ್ರಗಳಿಗೆ ಹೋದಾಗ, "ಕ್ಯಾಜೀ, ಗಾಡೀ ಆತಾ"? ಎನ್ನುವ ವೇಳೆಗೆ ತನ್ನ ಹಿಂದೀ ಶಬ್ಧ ಬಾಂಢಾರ ಬರಿದಾಗಿರುತ್ತಿತ್ತು. ಅದೇ ಸರಸು, ಗಾಡಿಯವನಿಗೆ ಬಾಡಿಗೆ ಕೊಡುವಾಗ, ಫಂಡಗಳಿಗೆ ದುಡ್ಡು ತೆರುವಾಗ—ಆ ಭಂಡ ಫಂಡಗಳ ಗಂಟಲಿಗಿಂತ ದೊಡ್ಡ ಗಂಟಲು ಮಾಡಿ ನಿರರ್ಗಳವಾದ ಭಾಷಾಪ್ರವಾಹ ಹರಿಸಿ, ಅವರನ್ನು ಮೆತ್ತಗೆ ಮಾಡಿಬಿಡುತ್ತಿದ್ದಳು!..." ಹಿಂದೀ ಬಹುಶಃ ಹೆಂಗಸರ ಭಾಷೆಯಿರಬೇಕು; ಅದಕ್ಕೇ ಬೇರೆ ಭಾಷೆಯಲ್ಲಿ ಪುಲ್ಲಿಂಗ, ನಪುಂಸಕ ಲಿಂಗದಲ್ಲಿರೋ ಶಬ್ದಗಳು ಹಿಂದಿಯಲ್ಲಿ ಸ್ತ್ರೀಲಿಂಗದಲ್ಲಿರೋದು...ಕಿತಾಬ್, ಘಡೀ—ಇತ್ಯಾದಿ, ಹಾಗೆ!" ಅಂದುಕೊಂಡ ಮೈಲಾರಯ್ಯ.

ಈಗ ತಲೆಯ ಮೇಲೆ ಕೈಹೊತ್ತು ಕೂತ, ಗಣರಾಜ್ಯದ ದಿನ ನಾಡಿನ ಹಿರಿಯ ಗಣಗಳು 'ಹಿಂದೀ ಅಧಿಕೃತಭಾಷೆ' ಎಂದು ಘೋಷಿಸಿಬಿಟ್ಟವು. "ಏನು ಗತಿ ಸರಸು?" ಎಂದು ಆಲಾಪಿಸಿದ. "ನೀವು ಸುಮ್ಮನೆ ಕೊರಗಿ ಕಡಿ ಆಗಬೇಡಿ. ಹೇಗಿದ್ದರೂ ನನಗೆ ಚೆನ್ನಾಗಿ ಹಿಂದೀ ಬರುತ್ತೆ. ನನ್ನ ಜೊತೇಲಿ ಮಾತಾಡಿ ರೂಢಿ ಮಾಡಿಕೊಳ್ಳಿ. ಮೊದಲು ಕನ್ನಡಕ್ಕೆ ಒಂದೊಂದು ಶಬ್ದವನ್ನು ಬೆರೆಸಿಕೊಂಡು ಮಾತಾಡೋಣ; ಆಮೇಲೆ ವಾಕ್ಯಗಳಿಗೆ ಜರುಗೋಣ; ಹೆದರಬೇಡಿ!" ಎಂದು ಸರಸು ಧೈರ್ಯ ಕೊಟ್ಟಳು.

ಸಂಭಾಷಣಾಪ್ರಯೋಗ ಪ್ರಾರಂಭವಾಯಿತು. ಪ್ರಯೋಗ ಯಶಸ್ವಿಯಾಗುತ್ತಿತ್ತೇನೋ—ಮನೆಯಲ್ಲಿ ಮೈಲಾರಯ್ಯನ ಮುದಿ ತಾಯಿ ಇಲ್ಲದಿದ್ದರೆ! ಆಕೆಗೆ ಒಂದು ತರಹ ವಿಚಿತ್ರದ ಕಿವುಡು—ಬೇಕಾದಾಗ ಕೇಳಿಸುತ್ತಿರಲಿಲ್ಲ. ಬೇಡವಾದಾಗ

ಕೇಳಿಸುತ್ತಿತ್ತು! ... "ಐದು ನಾರಿಯಲ್ ತನ್ನಿ ಬರುವಾಗ" ಅಂದಳು ಸರಸು. "ಇದೇನೇ ಅನ್ಯಾಯ ? ಒಬ್ಬಲ್ಲ ಇಬ್ರಲ್ಲ, ಐದು ಜನ ಹೆಂಗಸ್ರನ್ನ ಕರಕೊಂಡು ಬನ್ನಿ ಅಂತಿ! ಹೆಂಡತಿ ಆದೋಳು ಹೀಗೆ ಹೇಳೋದೇ! ನಾಚಿಕ್ಕೇಡು" ಎಂದರು ಮಹಾ ಲಕ್ಷಮ್ಮ. ನಾರಿಯಲ್ ಎಂದರೆ ತೆಂಗಿನಕಾಯಿ ಎಂದು ಕೊಟ್ಟ ವಿವರಣೆ ಮಾತ್ರ ಆಕೇ ಕಿವಿಗೆ ಬೀಳಲೇ ಇಲ್ಲ!

ಮತ್ತೊಮ್ಮೆ, "ಸರಸೂ ನಾನು ಇವತ್ತು ತುಂಬಾ ಕಾಮ್ ಕರ್‌ನ ಕಛೇರೀಲಿ" ಎಂದ ಮೈಲಾರಯ್ಯ. "ದೊಡ್ಡೋರು ಆ ಮಹಾನುಭಾವನಿಗೆ ದಾನಶೂರ ಕರ್ಣ ಅಂತ ಬಿರುದು ಕೊಟ್ಟಿದ್ದಾರೆ; ನೀನು ಆತನ್ನ ಕಾಮದ ಕರ್ಣ ಅನ್ನಬಹುದೇ! ಶಿವ ಶಿವಾ!" ಎಂದು ಕೇಳದ ಕಿವಿಯನ್ನು ಮತ್ತೂ ಭದ್ರವಾಗಿ ಮುಚ್ಚಿಕೊಂಡಳು ಮುದುಕಿ. ಕಡೆಗೊಂದು ದಿನ, ಸರಸೂ, ಮಾಕೇಭಾಯಿಯಾ ಸಾಯಂಕಾಲ ಊರಿಂದ ಬರ್ತಾರಂತೆ" ಎಂದಾಗ. "ಅಮ್ಮನಿಗೆ ಬ್ಬಾಯಿ ಜಾಸ್ತಿ ಅಂದೆಯಾ ? ಇನ್ನೊಂದು ಘಳಿಗೇನೂ ನಿಮ್ಮನೇಲಿರೊಲ್ಲ!" ಎಂದು ಸೀರೆ ಗಂಟು ಕಂಕುಳಲ್ಲಿ ಇರುಕಿಕೊಂಡು ಮಗಳ ಮನೆಗೆ ಹೊರಟು ನಿಂತ ತಾಯಿಯನ್ನು ಹರಸಾಹಸದಿಂದ ತಡೆದು ನಿಲ್ಲಿಸಿದ. ಮೈಲಾರಯ್ಯ, ಈ ಪ್ರಯೋಗಕ್ಕೆ ಮಂಗಳ ಹಾಡಿದ.

ಸಾಯಂಕಾಲದ ರೈಲಿನಲ್ಲಿ ಅವನ "ಮಾಕೇಭಾಯಿಯಾ" ಸೋದರಮಾವ ಸೀನಪ್ಪ ಬಂದ. ಪೆಚ್ಚು ಕಳೆ ಹೊತ್ತ ಸೋದರಳಿಯನ ಕಷ್ಟ ಸುಖ ವಿಚಾರಿಸಿ, ಗೊಳ್ಳೆಂದು ನಕ್ಕ!

"ಈಗ್ಯಾಕಪ್ಪ ಯೋಚನೆ ? ಹಿಂದೀ ಬರದೇ ಇದ್ದ ಪ್ರಾಂತಗಳಲ್ಲಿ ಇಂಗ್ಲೀಷು ಬಳಸಬಹುದು ಅಂತ ಶಾಸ್ತ್ರೀಜಿ ಧೈರ್ಯ ಕೊಟ್ಟಿದಾರಲ್ಲ?"

"ಆದರೇನು ಮಾವಯ್ಯ ? ಬೀಸೋ ದೊಣ್ಣೆ—ಎಂದಿದ್ರೂ ಬೀಳೋದೇ. 'ಒಂಟೆ—ಗುಡಾರ'ದ ನ್ಯಾಯದಹಾಗೆ ಹಿಂದೀನ ಮೆಲ್ಲಮೆಲ್ಲಗೆ ಹೇರ್‍ತಾ ಇದಾರೆ ನಮ್ಮ ಮೇಲೆ! ಹೀಗಿರುವಾಗ, ನನಗಿರೋ ಇನ್ನೂ ಹನ್ನೆರಡು ವರ್ಷದ ಸರ್ವಿಸಿನಲ್ಲಿ ಈ ಸಮಸ್ಯೆ ಬರದೇ ಇರುತ್ಯೇ ?"

"ಅಯ್ಯೋ ಮಂಕ! ಆಗತಾನೇ ಏನು ಕಷ್ಟ ? ತಿಳಿದ ಹಿಂದೀ ಪದಗಳ್ನ ಬಳಸಿ. ಬಾಕೀದು ಇಂಗ್ಲೀಷು, ಕನ್ನಡ ತೂರಿಸಿ, ಕಲಬೆರಕೆ ಮಾಡಿಡರಾಯ್ತು. ನಾನು ಈಗಾಗಲೇ ಮುನ್ನೆಚ್ಚರಿಕೆ ತೊಗೊಂಡು, ಈ ಬೆರಕೆ ಭಾಷೇಲಿ ಪಾಠ ಪ್ರಾರಂಭಿಸಿ ಬಿಟ್ಟಿದೀನಿ."

"ನೀನೇನೋ ಶಾಲಾ ಮಾಸ್ತರು—ಕುರೀ ಮಂದೇನ ಹೇಗೆ ಕಾದರೂ ನಡೆ ಯುತ್ತೆ; ನನ್ನ ಗತಿ ?"

"ನನ್ನ ಹಾಗೇ ನೀನೂ, ನನ್ನ ಪಾಠ ಹುಡುಗರಿಗೆ—ಮೊದಲೂ ಅರ್ಥ ವಾಗ್ತಿರಲಿಲ್ಲ, ಈಗಲೂ ಅರ್ಥವಾಗುಲ್ಲ!—ಹತ್ತು ವರ್ಷದ ನಿನ್ನ ಸಾಧನೆಯಿಂದ

ಹೇಗಿದ್ರೂ ಅಷ್ಟು ಪ್ರತ್ಯಯಗಳು, ಸರ್ವನಾಮ, ಕ್ರಿಯಾಪದ ತಲೇಗೆ ಹಿಡಿದಿವೆ. ಬಳಸಿ ಬರಿ—ಕೊನೇ ಅಕ್ಷರ ಒಂದನ್ನ ಹ್ರಸ್ವಮಾಡಿಬಿಡು ಅಷ್ಟೆ!...ಉದಾಹರಣೆಗೆ—ನಾಲೇಮೇ ಪಾನೀ ಫ್ಲೋತಾ ನಹೀ. ಪರ್‌ಹಾಪ್ಸ್ ಪಂಪ್ ಕಾ ಪ್ರೆಷರ್ ಇನಫ್ ನಹೀ. ಇಂಜನಿಯರ್ ಇಮ್ಮಿಡಿಯೇಟ್ ಮೇ ಇನ್‌ಸ್ಪೆಕ್ಷನ್ ಕರ್ನಾ. ನ್ಯೂ ಪಂಪ್ ಕಾ ಇನ್‌ಸ್ಟಾಲ್ ಕೇಲಿಯೇ ಆರ್ಡರ್ ಕೊಡ್‌ನಾ!...ಹೀಗೆ ಝಾಡಿಸು. ನಿನಗೆ ಬರೋ ಅಷ್ಟು ಹಿಂದೀನೂ ನಿನ್ನ ಮೇಲಧಿಕಾರಿಗೆ ಬರದೇ ಇರೋದರಿಂದ, ಉಸಿರೆತ್ತದೆ ರುಜು ಹಾಕ್ತಾನೆ!"

ಮೈಲಾರಯ್ಯನ ಮುದುಡಿದ್ದ ಮುಖ ಮೊರದಗಲವಾಯ್ತು.


—ಟಿ. ಸುನಂದಮ್ಮ

ಹಸ್ತಾಕ್ಷರಗಳನ್ನು ಪಡೆಯುವ ಹವ್ಯಾಸ ಬಲು ದುಃಖಕಾರಿ!

(ಪತ್ರಿಕೆ)

—ದಿಟ! ಮೊನ್ನೆ ಯಾರೋ ಯಾರೋ ಮೊರಾರ್ಜಿ ಅವರಿಗೆ ತಗಲಿಕೊಂಡು ಜೀ! ಶಾಸ್ತ್ರೀಜಿ ಹಸ್ತಾಕ್ಷರವನ್ನು ಕೊಡಿಸಿ" ಎಂದು ಕೇಳಿದರಂತೆ.

*　　*　　*　　*



ಮಾ— ಸ್ಕೂಲು ಫೀಜ್ ಯಾಕೋ ಕಟ್ಟಲಿಲ್ಲ?
ನೀವು ಹೇಳಿಕೊಡೊ ಹಿಂದೀಗೆ, ದುಡ್ಡು ಬೇರೆ ಕೊಡಬೇಕೇ ?

ಕೈಗೆ ಎಟುಕದ ಹೆಣ್ಣು

ಈ ಹಿಂದೆ ಹೇಳಿದ ಘಟನೆಗಳು ನಡೆದ ಮರುದಿನ ಮುಗಿಲು ಹಳ್ಳಿಯ ಅತ್ಯಂತ ಅಧಿಕ ಪ್ರಸಾರವುಳ್ಳ ಒಂದಾಣೆ ಪೇಪರ್. 'ಕರ್ಣ ಪಿಶಾಚಿ' ಯಲ್ಲಿ ಒಂದು ಜಾಹಿರಾತು ಕಾಣಿಸಿಕೊಂಡಿತು.

ಹಿಂದಿ ಅಧಿಕೃತ ಭಾಷೆಯಾಗಲಿದೆ !

ನಿಮ್ಮ ಕರ್ತವ್ಯವೇನು ?
ಬ್ಯಾಡ್ಮಿಂಟನ್ ಆಡುವಿರಾ !
ರಾಷ್ಟ್ರಪ್ರೇಮ ನಿಮ್ಮಲ್ಲಿರುವುದಾದರೆ
ಕೂಡಲೇ ಕೆಳಕಂಡ ಶಾಲೆಗೆ ಸೇರಿರಿ.

ಕಾಟ ಹಿಂದೀ ಮಂದಿರ
ಹತ್ತೀಪೇಟೆ

ಎಲ್ಲ ವಿಧವಾದ ಹಿಂದೀ ಪ್ರಚಾರ ಮಾಡಲ್ಪಡುತ್ತೆ.

ಮುಗಿಲು ಹಳ್ಳಿಯ ನಾಗರಿಕರೆಲ್ಲರೂ ಈ ಜಾಹಿರಾತಿನಿಂದ ಪ್ರಭಾವಿತರಾಗ ಬೇಕೆಂಬುದು ಕಾಟನ ಅಭಿಪ್ರಾಯವಲ್ಲ. ಅವನ ಅಭಿಪ್ರಾಯವೇನೆಂಬುದನ್ನು ನೀವು ಊಹಿಸಬಲ್ಲಿರಿ. ನಿಮಗೆ ಅದು ತಿಳಿದಿದೆ, ತಿಳಿಯದಿದ್ದಲ್ಲಿ ಸ್ಪಷ್ಟವಾಗಿ ಹೇಳಿಯೇ ಬಿಡೋಣ. Full flavour Coffee ರೆಸ್ಟುರಾಂಟಿನ ಮಹಡಿಯ ಹಿಂಭಾಗದ ಮೇಲುಪ್ಪರಿಗೆಯಲ್ಲಿ ಬ್ಯಾಡ್ಮಿಂಟನ್ ಆಡುತ್ತಿದ್ದ ಒಬ್ಬಾನೊಬ್ಬ ಹುಡುಗಿ ತನ್ನ ಶಿಷ್ಯೆಯಾಗಲಿ ; ಎನ್ನುವುದೇ ಅವನ ಅಭಿಪ್ರಾಯ.

ಆದರೆ ಅಹೋ ಆಶ್ಚರ್ಯವು ! ಈ ಜಾಹಿರಾತು ಕಾಣಿಸಿಕೊಂಡ ಹಿಂದಿನ ರಾತ್ರಿ ಕಾಟನ ಜೀವನ ನಾಟಕದಲ್ಲಿ ನಡೆದ ಘಟನೆಯನ್ನು ನೀವು ಅರಿಯದಿದ್ದಲ್ಲಿ ಅವನನ್ನು "ಪೋಲಿ" ಎಂದುಕೊಳ್ಳಬಹುದು. ಆ ಪ್ರಸಂಗವನ್ನು ನೀವು ತಿಳಿಯಲೇಬೇಕು.

ಶಿಶಿರ ಋತುವಿನ ತಿಳಿಯಾಗಸದಲ್ಲಿ ಕಾಣಿಸಿಕೊಳ್ಳುವ ಜ್ವಾಜ್ವಲ್ಯಮಾನ ಉಲ್ಕೆಯಂತೆ ಎರಡು ಜಡೆಯ ಧಾವಳಿ ಹುಡುಗಿ ಕಾಟನ ಜೀವನದಲ್ಲಿ ತಲೆದೋರಿದಳಷ್ಟೆ, ಆ ಉದ್ವೇಗದಲ್ಲಿ ಕಾಟನು ಹೋಟೆಲಿನಿಂದ 'ಕರ್ಣಪಿಶಾಚಿ' ಆಫೀಸಿಗೆ ಹೋಗಿ ಮೇಲ್ಕಂಡ ಜಾಹಿರಾತನ್ನು ಕೊಟ್ಟುದು ನಿಜ. ಸಂಪಾದಕರು ಕೊರೆ ಬೀಡಿ ಸೇದುತ್ತಾ.

"ಲೇ ಓ...ಕೆ ನಿನ್ತಲೆ ಕೆಟ್ಟು ಮಸರ್ಗ ಡಿಗ್ಗೈತೆ, ತೆಪ್ರ ಮಂಗ" ಎಂದು ಮುಂತಾಗಿ ಪ್ರೋತ್ಸಾಹ ಕೊಟ್ಟು ಒಂದು ರೂಪಾಯಿ ಹಣ ಸ್ವೀಕರಿಸಿದುದೂ ನಿಜ.

ಅಷ್ಟುಹೊತ್ತಿಗೆ ಕತ್ತಲಾಗಿತ್ತು. ಚಳಿಗಾಳಿ ಘೋರೆಂದು ಬೀಸುತ್ತಿತ್ತು. ವಿದ್ಯುದ್ದೀಪಗಳು ಮಂಕಾಗಿ ಆರಿಹೋದವು. ಚೌಕೀಪೇಟೆ ಅಂಧಕಾರದಲ್ಲಿ ಮುಳುಗಿತ್ತು. ಗಾಡಿಗಳು ಲಾರಿಗಳು ಕಿಕ್ಕಿರಿದು ನೆರೆದಿದ್ದವು. ಕಾಟನ ತಲೆಗೇರಿದ್ದ ಅಮಲು ವಿದ್ಯುದ್ದೀಪಗಳಂತೆ ಹಠಾತ್ತಾಗಿ, ಮಂಕಾಗಿ ನಂದಿಹೋಯಿತು. ಅವನ ಮನಸ್ಸು ಚೇಳು ಕುಟುಕಿದ ದೇಹದಂತೆ ಉರಿಯೇರಿ ಕಂಪಿಸಿತು. 'ಅಯ್ಯೋ, ಅಯ್ಯೋ, ಅಯ್ಯೋ !!' ಎಂದು ಕಾಟ ಕೂಗಿಕೊಂಡ. 'ಏನಾತಲೇ ಮಂಗಾ ! ಯಾವನಲೇ ಅವನು' ಎಂದು ಕತ್ತಲಿನತ್ತಣಿಂದ ಹಮಾಲರು ಕೂಗಿದರು. ಕಂಪಿಸುವ ದೇಹವನ್ನೂ ಮುರಿದ ಮನಸ್ಸನ್ನೂ ಸಂತೈಸಿದ ಕಾಟ, ಪಕ್ಕದಲ್ಲೇ ಇದ್ದ ಅಂಗಡಿಯೊಂದರ ಕಟ್ಟೆಯ ಮೇಲೆ ಕುಳಿತ. ಹಿಂದಾದುದನ್ನು ನೆನೆದ.

ಅವನು ಹತ್ತೊಂಬತ್ತರ ಹರೆಯದಲ್ಲಿ ಕಾಲೇಜಿಗೆ ಕಾಲಿಟ್ಟು ಇಪ್ಪತ್ತು ಮೂರನೆಯ ವಯಸ್ಸಿಗೆ ಘುಗಿಲು ಹಳ್ಳಿಯಿಂದ ಕಾಲುಕಿತ್ತು ಓಡಿದ ವರೆಗಿನ ಚಿತ್ರಗಳು ಅವನ ಸ್ಮೃತಿಪಥದಲ್ಲಿ ಹಚ್ಚ ಹಸುರಾಗಿ ಕಾಣಿಸುತ್ತಾ ಬಂದವು.

ಅವನು ದುರ್ಬಲನೇ ? ಅಲ್ಲ. ಅವನ ಮೀಸೆಯ ಮಾತಿರಲಿ, ಜಟ್ಟಿಯ ಮೈಕಟ್ಟು ಯಾರಿಗಾದರೂ ಸುಸ್ಪಷ್ಟವಾಗಿ ಕಾಣಿಸುವಂತಹದು

ಕುರೂಪಿಯೇ ? ಯಾರು ಹಾಗೆಂದವರು ! ಅದವನೇ ? ಅಲ್ಲಲ್ಲ. ದಣ್ಣಾಯಕನ ದುರ್ಗವನ್ನು ಅವನ ಪೂರ್ವಜರು ಆಳುತ್ತಿದ್ದರು. ಪಾಳೆಯಗಾರಿಕೆ ಪದ್ಧತಿಯೇ ಮುಂದುವರಿದು ಬಂದಿದ್ದಲ್ಲಿ ಅವನಿಷ್ಟುವೇಳೆಗೆ 'ಕ್ಷೋಣೀ ಮೀಸರ ಗಂಡ, ಎಂಬ ಬಿರುದನ್ನು ಹೊತ್ತು ಮೆರೆಯುತ್ತಿದ್ದ.

ದುಬ್ಬನೇ ? ಅಲ್ಲವೆಂದವರು ಯಾರು. ಬುದ್ಧಿವಂತರು ಬಾಳಿಬದುಕುವಂತಹ ಲೋಕವೇ ಇದು !

ಹೀಗಿದ್ದರೂ ಅವನು ಮನ-ತೆತ್ತ ಹೆಣ್ಣು, ಅವನನ್ನು ನಿರಾಕರಿಸಿದ್ದಳು. ಅವಳನ್ನು ಅವನು ಈ ಹಿಂದೆ ಕೊನೆಯ ಬಾರಿ ನೋಡಿದಾಗ ಅವಳು Flex ಕಂಪನಿಯ...ಅಯ್ಯೋ ಮುಂದಿನದ ಹೇಳಲೇಕೆ ?

ಆದರೂ ಕಾಟ ಅವಳ ಹಂಬಲ ಬಿಡಲಿಲ್ಲ ತಾನು ದರಿದ್ರನೆಂಬ ಕಾರಣದಿಂದ ಅವಳು ತನ್ನನ್ನು ತಿರಸ್ಕರಿಸಬಹುದೆಂಬ ಭಯದಿಂದ ಅವನು P.W.D. ಗೆ ಸೇರಿ ಸಹಸ್ರಾಧೀಶನಾದ.

ಈಗಲೀಗ, ಹಿಂದಿನ ಪ್ರೇಮವನ್ನೆಲ್ಲವನ್ನೂ ತೊರೆದು ದ್ರೋಹಿಯಾಗಿ ಕುಡಿಯುವ ಕಾಫಿಗೆ ಬ್ಯಾಡ್ಮಿಂಟನ್ ಬಾಲು ಹಾಕಿದ ಹುಡುಗಿಯನ್ನು ತನ್ನ ಮನಸ್ಸು

ಬಯಸಿದುದಕ್ಕಾಗಿ ಅವನಿಗೆ ಅತ್ಯಂತ ಖೇದವೆನಿಸಿದುದು ಸ್ವಭಾವ ಸಹಜವಾದುದೇ ಸರಿ. (ಹೀಗೆ ಅವನು ಯೋಚಿಸಿದುದರಿಂದ ಕಾಟನು ಧೀರ ಲಲಿತ ನಾಯಕನೆಂಬುದು ಸುಸ್ಪಷ್ಟವಾಗಿ ವ್ಯಕ್ತಪಡುತ್ತದೆ.)

ಕಾಟನು ಧೈರ್ಯಮಾಡಿ ಎದ್ದ—ಮನಸ್ಸಿನ ಕ್ಲೈಬ್ಯವನ್ನು ತೆಗೆದೊಗೆದು. ಆದುದಾಗಲಿ ಕೈಗೆ ಎಟುಕದ ಹೆಣ್ಣನ್ನು ಮತ್ತೊಮ್ಮೆ ಮಾತನಾಡಿಸಿ ಬರೋಣವೆಂದು ಹೊರಟ. (ಅವಳು ಮದುವೆಯಾಗಿ, ಗಂಡನ ಮನೆಗೆ ಹೋಗಿರುವಳೆಂಬುದು ಅವನಿಗೆ ತಿಳಿದಿತ್ತು. ಆದರೂ...) ದೀಪಗಳು ಹೊತ್ತಿಕೊಂಡವು, ರತ್ನಾವಳಿ ಎಕ್ಸ್‌ಟೆನ್ಷನ್ನಿನಲ್ಲಿ ಬೀದಿ ದೀಪಗಳು ಮಂಕಾಗಿ ಕಣ್ಣು ಪಿಳಿ–ಪಿಳಿ ಮಾಡುತ್ತಿದ್ದವು. ಅವನು ತನ್ನ ಆಶಾ ಸುಂದರಿಯ ಮನೆಯ ಬಳಿಗೆ ಹೋದ. ಅದನ್ನು ಮೂರು ಬಾರಿ ಪ್ರದಕ್ಷಿಣೆ ಮಾಡಿದ. ಅದೇ ಭೂಮಿ. ಅದೇ ಆಕಾಶ. ಅದೇ ಮನೆ, ಅದೇ ಸೊಳ್ಳೆಗಳು, ಅವನೇ ಕಾಟ ಆದರೆ ಅವಳಿಲ್ಲ. ಇಲ್ಲವೇ ಇಲ್ಲ. ಅಣುಯುಗದ ಶಾಂತಿಯಂತೆ ಅವಳು ಮಾಯವಾಗಿ ಹೋಗಿಬಿಟ್ಟಿದ್ದಳು.

'ಕಾಟಾ, ನೀನು ಈಗಲೀಗ ಕೆಟ್ಟೆ!' ಎಂದು ಕಾಟನು ಉದ್ಗರಿಸಿದ. ಆಶಾ ಸುಂದರಿಯ ಮನೆಯ ಬಾಗಿಲುಗಳು ಮುಚ್ಚಿದ್ದವು. ಒಳಗಿನಿಂದ ಯಾವ ಸದ್ದೂ ಇಲ್ಲ. ಬೀದಿಯಲ್ಲಿ ಜನಗಳ ಸಂಚಾರವಿಲ್ಲ, ಚರಂಡಿ ಹೆಗ್ಗಣಗಳು ಅಲ್ಲಲ್ಲಿ ಸದ್ದು ಮಾಡುತ್ತಿದ್ದವು. ಅವನು ಹಿಂದಿರುಗಿ ಹೊರಟ.

ಹೋಟೆಲಿನಲ್ಲಿ ಊಟ ಮುಗಿಸಿ ಕೋಣೆಗೆ ಹೋಗಿ ಬಿದ್ದುಕೊಂಡ. ನಿದ್ದೆ ಮಾಡಿದ.

ಮರುದಿನ ಎದ್ದಾಗ ಗಂಟೆ ಒಂಬತ್ತಾಗಿತ್ತು. ಬೆಡ್‌ಷೀಟಿನಿಂದ ಮುಖವನ್ನು ಡ್ರೈವಾಷ್ ಮಾಡಿಕೊಂಡು ಹೋಟೆಲಿಗೆ ಹೋಗೋಣವೇ ಎಂದು ಯೋಚಿಸುತ್ತಿದ್ದ. ಯಾರೋ ಕದವನ್ನು ತಟ್ಟಿದರು, ಕಾಟ ಬಾಗಿಲು ತೆಗೆದ. ಬಾಯಿತೆರೆದು ಹಲ್ಲುಕಿರಿದ.

ಹಿಂದಿನ ರಾತ್ರಿಯೊಂದರಲ್ಲೇ ಮುಂಗಿಲು ಹಳ್ಳಿ ಸುಮಾರು ಎರಡು ಸಾವಿರ ಕಿಲೋಮೀಟರುಗಳಷ್ಟು ಮುಂದುವರಿದಿರಬೇಕೆಂದುಕೊಂಡ. ಇಲ್ಲದಿದ್ದರೆ ಆ ಎರಡು ಜಡೆಯ ಧಾವಳಿ ಹುಡುಗಿ ಸೈಕಲ್ ಮೇಲೆ 'ಕಾಟ ಹಿಂದೀ ಮಂದಿರ'ಕ್ಕೆ ಬಂದು ಬಾಗಿಲು ತಟ್ಟುತ್ತಿದ್ದಳೇ !

'ನಮಸ್ಕಾರ ಮೇಷ್ಟ್ರೇ' ಎಂದಳು ಆ ಸೈಕಲ್ ಬಾಲೆ.

'ಬರ್‍ರೀ, ಬರ್‍ರೀ' ಎಂದ ಕಾಟ.

'ನಿಮ್ಮಿಂದ ಸ್ವಲ್ಪ help ಬೇಕಾಗಿತ್ತು'

'ಆಗಲಿ ನಾನಿರುವುದೇ ಅದಕ್ಕೆ'

'ಸಾಹಿತ್ಯ-ರತ್ನ ಪರೀಕ್ಷೆ ಕಟ್ಟಿದ್ದೇನೆ'

'ಬಹಳ ಸಂತೋಷ'

'ನಾನು ಯಾರು ಗೊತ್ತೇ'

'ಸಾಧನಾ ?'

'ಅಲ್ಲ'

'ದೇವಿಕಾ ?'

'ಅಲ್ಲ'

'ಹಾಗಾದರೆ ನೀವು ಯಾರು ?'

'ಬಿಂಕದ ಸಂಕಣ್ಣನವರ ಸ್ನೇಹಿತರ ಮಗಳು'

'ಹಾಗೇನು !'

'ನಾನು ಹಿಂದೀ ಕಲಿತಮೇಲೆ ಭಾರೀ ಛಾನ್ಸ್ ಕೊಡಿಸುವುದಾಗಿ ಸಂಕಣ್ಣನವರು ಹೇಳಿದ್ದಾರೆ'

'ಛಾನ್ಸ್ ಸಿಕ್ಕರೆ ಬಿಡಬೇಡಿ'

'ನಮ್ಮ ತಂದೆಯುವರು ಭಾರೀ ಸ್ವಾಮಿಗಳಾಗಿದ್ದಾರೆ'

'ಅವರ ಹೆಸರನ್ನೇ ಕೇಳಿಲ್ಲವಲ್ಲ'

'ಛೇ ಛೇ, ನೀವು ಅವರ ದರ್ಶನ ಪಡೆಯಲೇಬೇಕು'

'ಅವರ ಹೆಸರೇನು ?'

"ಶ್ರೀ ಶ್ರೀ ವಿಷಯಾನಂದರು"

'ನೀವು ಯಾವ ಟೈಂಗೆ ಪಾಠಕ್ಕೆ ಬರುತ್ತೀರಿ'

"ಇಲ್ಲ ನೀವೇ ನಮ್ಮ ಮನೆಗೆ ಬಂದು ಹೇಳಿಕೊಡಬೇಕು"

"ಫೀಸ್ ಏನು ಕೊಡುತ್ತೀರಿ"

"ನಮ್ಮ ತಂದೆಯುವರನ್ನು ಕೇಳಿ"

"ಈಗ ನಿಮ್ಮ ಜೊತೆಗೆ ಬರುತ್ತೇನೆ ಮನೆ ತೋರಿಸಿ ಬಿಡಿ. ನಾಳಿನಿಂದ ಪಾಠ ಹೇಳಿಕೊಡುತ್ತೇನೆ"

"ಹಾಗಾದರೆ ಕ್ಯಾರಿಯರ್ ಮೇಲೆ ಕುಳಿತುಕೊಳ್ಳಿ"

"ಬೇಡ ! ಬೇಡ !" ಎಂದ ಕಾಟ-ಗಾಬರಿಯಾಗಿ.

(ಸಶೇಷ)

ತಪ್ಪು ಯಾರದು ?

ಹಿಂದಿಯೊಂದೇ ಎನುವ ಅಂಧರ ತಪ್ಪೋ
ದಾರಿಕಾಣದೆ ರೊಚ್ಚಿಗೆದ್ದವರ ತಪ್ಪೋ
ಮೇರೆಯರಿಯದೆ ಹಿಂದಿ ತುರುಕುವರ ತಪ್ಪೋ
ಎಲೆ ಇಂಡ್ಯ, ನಿನ್ನ ಘಟನೆಯಲೆ ತಪ್ಪೋ

ದೊಂಬಿದಾಸ್ ಡಿಯಂಕೆಯ ತಪ್ಪೋ
ಹಿಂದು ಕಾಯುವ ಪಾರ್ಟಿಮಂದಿಯ ತಪ್ಪೋ
ಅಂಕೆ ಮೀರಿದ ಪುಂಡ ಪೋಕರ ತಪ್ಪೋ
ಅವರನಾಡಿಸುವ ರೊಕ್ಕದ ಚೀಲಗಳ ತಪ್ಪೋ

ಭಾಷೆಯ ನೆಪವನು ಬಳಸುವರ ತಪ್ಪೋ
ಸರಿದಾರಿ ತೋರದ ಹಿರಿಯರ ತಪ್ಪೋ
ಕುರುಡಾಗಿ ಮುನ್ನುಗ್ಗುವೆಳೆಯರ ತಪ್ಪೋ
ಕಾಲು ಕಡಿ ಕಾಣೆಯಾಗ್ತಿರೋದೆ ತಪ್ಪೊ

ಗೊತ್ತುಗುರಿಯಿಲ್ಲದ ಸ್ಟೇಟ್‌ಮೆಂಟ್‌ಗಳ ತಪ್ಪೋ
ನೆಹರೂ ಮಾತಡಿಗಡಿಗೆ ಆಡುವರ ತಪ್ಪೋ
ಗೋಡೆಮೇಲೆ ಕುಳಿತಿದ್ದ ನೆಹರೂದೆ ತಪ್ಪೋ
ದೇಶದಲ್ಲಿ ಭಾಷೆ ಹೆಚ್ಚಾದುದೇ ತಪ್ಪೋ

ಇಂಗ್ಲೀಷ್ ಗ್ರಾಮರ್ ಬಡೇ ಮುಷ್ಕಿಲ್ಲಾದ್ದು ತಪ್ಪೋ
ಹಿಂದೀ ಭಯ್ಯಾಗೆ ಬೇರೆ ಭಾಷೆಗಳೆಲ್ಲ ತಪ್ಪೋ
ರಾಜಾಜಿ (ಸಾಬಾಜಿ!) ಅನ್ನಾದೊರೈಯಾದಿ
ಮಂದಿಗೆ ಸುಗ್ಗಿಯು ಕಾಲಾಂದ್ರೆ ತಪ್ಪೋ

(ಚಿಕದೇವರಾಜ ಒಡೆಯರಿಗೆ ನಮೋ ಎಂದು.)

— ರಾಮಿ

ಪತ್ರಾವಳಿ

ಬರೆದವರು :
ಕೆ. ಎನ್. ಕಿಟ್ಟನ್

★

ಕ್ಷೇಮ. ಶ್ರೀರಾಮರಕ್ಷೆ ತಾ॥

ಮುಳ್ಳೂರು.

ಚಿ॥ ರಾ॥ ಗುರುರಾಯನಿಗೆ, ನಿನ್ನ ತಂದೆ ಮುಳ್ಳೂರಿನ ಶ್ಯಾನುಭೋಗ್ ಶಿಂಗ್ರಯ್ಯನು ಬರೆಸುವುದೇನೆಂದರೆ, ಅದಾಗಿ ಈವರೆವಿಗೆ ಉ॥ ಕು॥ ಸಾಂಪ್ರತ. ಇಲ್ಲಿ ಸುತರಾಂ ಮಳೆಯಿಲ್ಲ, ಫಸಲುಗಳನ್ನು ಬೆಳೆದ ರೈತಾಪಿಗಳೂ ಕೂಡ ಹಿಟ್ಟುರೊಟ್ಟಿ ಯಿಲ್ಲದೆ ಒದ್ದಾಡುತ್ತಿದ್ದಾರೆ. ಪಟೇಲ್ ಮುಳ್ಳೂರಯ್ಯನೇ ಸುಗ್ಗಿಯ ಭತ್ತದ ದಾಸ್ತಾನು ಮಾಡಿ, ಅವನ್ನೆಲ್ಲಾ ಕಪ್ಪುಸಂತೆಯಲ್ಲಿ ವಿಕ್ರಯಿಸುತ್ತಿದ್ದಾನೆಂದು ವದಂತಿ ಯಿದೆ. ಪಟ್ಟಣದ ಮಂಡಿಯ ಕರಿಬಸವೇಗೌಡ-ಮುಳ್ಳೂರಯ್ಯನ ಪಡ್ನರ-ಈ ವ್ಯಾಪಾರದಲ್ಲಿ ಪರೀಖ್ ಆಗಿರುವನೆಂದು ಸುದ್ದಿ. ಎಲ್ಲಿ ಹೇಗಾದರೂ ಹಾಳಾಗಲಿ, ನಾನು ಮಾತ್ರ ಕಣಜವನ್ನು ತುಂಬಿಸಿದ್ದೇನೆ. ಯಾವ ಕಾಲಕ್ಕೆ ಏನೋ ಹೇಳುವ ಹಾಗಿಲ್ಲ. ತಪಾಸಣೆಗೆ ಬರುವ ಅಧಿಕಾರಿಗಳನ್ನು ಕೈಯೊಳಗಿಟ್ಟುಕೊಂಡಿರುವುದರಿಂದ ಯಾವ ತಾಪತ್ರಯವೂ ಇಲ್ಲ. ಇಲ್ಲಿನ ವಾತಾವರಣ ಕೆಟ್ಟಿದೆ. ನಮ್ಮ ಹೊಲದ ಬದಿಯಲ್ಲಿದ್ದ ಹುಣಿಸೇ ಮರವನ್ನು ನೀನು ನೋಡಿರಬಹುದು, ಅದು ರಂಗೇಗೌಡನ ಹೊಲದ ಬದುವಿನಲ್ಲಿ ಬೆಳೆದಿರುವುದರಿಂದ ಅವ ಅವನ್ನು ತನ್ನದೇ ಎಂದು ಹೇಳಿಕೊಂಡು ತಿರುಗುತ್ತಿದ್ದಾನೆ. ಪಟೇಲನ ಕುಮ್ಮಕ್ಕು ಅವನಿಗಿರುವುದರಿಂದಲೇ ಅವನು ಸದರಿ ಹುಣಿಸೇ ಹಣ್ಣನ್ನು ಕಿತ್ತುಕೊಳ್ಳುತ್ತಿದ್ದಾನೆ, ಆ ಮುಟ್ಠಾಳನಿಗೆ ಸಮಸ್ತ ಖಾತೆಗಳು ನನ್ನ ಅಧೀನದಲ್ಲಿರುವುದು ಅರಿವಿಗೆ ಬಂದಿಲ್ಲವೆಂದು ತೋರುತ್ತೆ. ನಾನು ಕಿರದಿಯಲ್ಲೂ ಇತರ ಖಾತೆಗಳಲ್ಲೂ ಆ ಮರವನ್ನು ನಮ್ಮ ಹೊಲದ ಚೇತರ್ಫಿಗೆ ತಳ್ಳಿಸಿದ್ದೇನೆ. ಲಾಯರ್ ಕೊಂಡಯ್ಯನವರ ಕೈಯಲ್ಲೇ ಕೇಸನ್ನು ಕೊಟ್ಟಿದ್ದೇನೆ. ಕೊಂಡಯ್ಯನವ ರಿಗೂ ಈಗ ಬಂದಿರುವ ಮುನಸೀಫರಿಗೂ ಹೆಂಡತಿಕಡೆ ಸಂಬಂಧವಿರುವುದರಿಂದ ಲಾಯರು ಹೊಸಬರಾದರೂ ಜಯ ನಮ್ಮ ಕಡೆಗೇ ಎಂಬುದು ದಿಟ. ಸತ್ಯಮೇವ ಜಯತೆ ಅಷ್ಟೆ.

ಈ ಪತ್ರವನ್ನು ಲಿಖಿಸುತ್ತಿರುವ ಮುಖ್ಯೋದ್ದೇಶವೇನೆಂದರೆ, ನಿನ್ನನ್ನು ಪಟ್ಟಣಕ್ಕೆ ಓದಲು ಕಳಿಸಿದ್ದು ನನ್ನ ತಪ್ಪೆಂದೇ ಭಾವನೆಯಾಗಿದೆ. ಏಕೆಂದರೆ ನಾನು ಕೇಳುತ್ತಿರುವ ಕಹಿ ಸುದ್ದಿಗಳು, ಕಿವಿಗೆ ಕಾದ ಕಬ್ಬಿಣದ ಪಾಕವನ್ನು ಸುರಿದ ಹಾಗಿದೆ.

ನಿನ್ನ ಕಾಗದಗಳೂ ನಮ್ಮೂರಿನ ಮಳೆಯಂತೆಯೇ ಅಕಾಲೀಕವಾಗಿ ಬರುತ್ತಿದ್ದರೂ, ನನಗೆ ನಿನ್ನ ಖಾಸ ಸುದ್ದಿಗಳು ತಿಳಿಯುವುದಿಲ್ಲವೆಂದುಕೊಳ್ಳಬೇಡ. ನಿನ್ನ ಜತೆಯಲ್ಲಿ ನಿನ್ನ ಕ್ಲಾಸಿನಲ್ಲಿಯೇ ಓದುತ್ತಿರುವ ನಮ್ಮೂರ ಒಡ್ಡರ ಬೋಯಿಯ ಮಗ ತಿಮ್ಮಾಯಿ ಈ ಬಾರಿ ಊರಿಗೆ ಬಂದಿದ್ದಾಗ ಮನೆಯ ಕಡೆಗೆ ಬಂದಿದ್ದ. ಅವನನ್ನು ಅಂಗಳದಾಚೆ ಕೂಡಿಸಿ, ಕೇಳಿದಾಗ ನಿನ್ನ ಯಾವತ್ತೂ ವಹಿವಾಟುಗಳನ್ನು ವರ್ಣಿಸಿದ, ನೀನು ಶವಚ್ಛೇದನ ಮಾಡುವ ವಿಷಯ ತಿಳಿದು ಮನಸ್ಸಿಗೆ ಖೇದವಾಯಿತು. ದಂತವೈದ್ಯರು ಶವಕುಯ್ಯುವ ತಂಟೆಯಿಲ್ಲ ಎಂದು ನೀನೂ, ಮತ್ತು ಈ ಊರಿನ ಘನಪಾಟಿ ಅಳಲೇ ಕಾಯಿ ಪಂಡಿತ ಸುಬ್ರಾಮಯ್ಯನೂ ಸೇರಿ, ನನ್ನ ಮೂಗಿಗೆ ತುಪ್ಪ ಸವರಿದಿರಿ ಸದರಿ ಸಮಾಧಾನದಿಂದಲೇ ನಾನು ನಿನ್ನನ್ನು ಆ ವಿದ್ಯೆಗೆ ಸೇರಿಸಿದ್ದು. ಆದರೆ ತಿಮ್ಮಾಯಿ ಹೇಳುವ ಪ್ರಕಾರ ದಂತವೈದ್ಯ ವ್ಯಾಸಂಗದಲ್ಲೂ ಮೊದಲನೆ ವರ್ಷ ಹೆಣ ಕುಯ್ಯಬೇಕೆಂದು ತಿಳಿದು ನಿನ್ನನ್ನು ಆ ವಿದ್ಯೆಗೆ ದಾಖಲು ಮಾಡಿದ್ದು ತಪ್ಪಾಯಿತೆಂದು ವಿಷಾದ ಪಡುತ್ತಿದ್ದೇನೆ. ಈ ಮಾತು ಕೇಳಿ ನಿನ್ನ ಅಜ್ಜಿಯೇ ಪ್ರಾಣಾಪವರ್ಜನೆ ಮಾಡಿಸಿಕೊಂಡು ಪಂಚಗವ್ಯ ಕುಡಿದಳು. ಒಡ್ಡರ ತಿಮ್ಮಾಯಿಯೇ ತಾನು ಹೆಣವನ್ನು ಕುಯ್ಯುವುದಿಲ್ಲವೆಂದು ಮೇಷ್ಟರುಗಳಿಗೆ ಹೇಳಿ ಮಡಿವಂತಿಕೆಯನ್ನು ಪ್ರದರ್ಶಿಸಿರುವಾಗ, ನೀನೇ ನುಗ್ಗಿ ಕಸಾಯಿ ಸಾಬರ ರೀತ್ಯಾ ಶವಚ್ಛೇದನ ಮಾಡಿದೆಯೆಂದು ತಿಳಿಯಿತು. ಈ ಉಸಾಬರಿಯೆಲ್ಲಾ ನಿನಗೇಕೆ? ಇನ್ನುಮೇಲಾದರೂ ನೀನು ಹಲ್ಲಿನ ವಿಷಯವಷ್ಟು ಉಳಿದು ಮಿಕ್ಕದ್ದನ್ನು ಯಾವನೇ ಹೇಳಿದರೂ ಮಾಡಬೇಡ. ಇದಕ್ಕಾಗಿ ನಾವು ಕೋರ್ಟು ಹತ್ತಿದರೂ ಪರವಾಗಿಲ್ಲ. ನಮ್ಮ ಪರವಾಗಿ ಕ್ರಿಮಿನಲ್ ಕೊಂಡಯ್ಯನವರು ಇದ್ದೇ ಇದ್ದಾರೆ. ನೀನು ಯಾವಾಗ ದಂತವೈದ್ಯನಾಗಿ ವಾಪಸು ಬರುತ್ತೀಯೋ ಎಂದು ಕಾತರದಿಂದ ಕಾಯುತ್ತಿದ್ದೇನೆ. ಹುಳುಕು ಹಲ್ಲುಗಳನ್ನು ಕೀಳಿಸದೆ, ಗೋಕುಲಾಷ್ಟಮಿಯೆಂದು ಮಾಡಿದ ಭಕ್ಷಗಳನ್ನು ತಿನ್ನದೆ ಸಂಕಟಪಡುತ್ತಿದ್ದೇನೆ. ಬೇರೆ ಧನ್ವಂತರಿಗಳಿಂದ ರಿಪೇರಿ ಮಾಡಿಸಿಕೊಳ್ಳಲು ನನಗೆ ಸುತರಾಂ ಮನಸ್ಸಿಲ್ಲ. ನೀನಾದರೋ ವ್ಯಾಸಂಗದ ಕಡೆ ಲಕ್ಷಕೊಡದೆ, ಹಳ್ಳಿಯ ಬಯಲಾಟದವರಂತೆ, ಬಣ್ಣಮೆತ್ತಿಕೊಂಡು ಯಕ್ಷಗಾನದವರಂತೆ ವೇಷ ಹಾಕಿಕೊಂಡು ಸಿನಿಮಾ, ಸಂಗೀತ ಎಂದು ಓಡಿಯಾಗುತ್ತಿದ್ದೀಯಂತೆ. ಇದು ನಿನಗೆ ಸಲ್ಲುವುದೇ ತಿಳಿಸು.

ನೀನು ಇತ್ತೀಚೆಗೆ ಹದ್ದುಮೀರಿ ವರ್ತಿಸುತ್ತಿದ್ದಿಯೆಂದು ತಿಮ್ಮಾಬೋಯಿ ಹೇಳಿದ. ನಿನ್ನ ಕ್ಲಾಸಿನಲ್ಲಿ ಓದುತ್ತಿರುವ ಕೊಂಗರ ಕಪ್ಪು ಹುಡುಗಿಯೊಂದನ್ನು ಇಂಗ್ಲೀಷಿನಲ್ಲಿ ಹಾಸ್ಯ ಮಾಡಿ ಬೈಸಿಕೊಂಡೆಯಂತೆ. ಈ ಪಟಿಂಗತನವೆಲ್ಲಾ ನಿನಗೇತಕ್ಕೆ? ಹೆಂಚಿನ ಮನೆಯವರ ಮಾನವನ್ನು ನೀನು ಆ ಪೇಟೆಯಲ್ಲಿ ಮಾರಿಕೊಂಡು ಬರುವ ಹಾಗಿದೆ. ಮೊನ್ನೆ ಜಲಪಾತ ನೋಡಲಿಕ್ಕೆಂದು ತಾವರೆಕೆರೆಗೆ ನೀನು ನಿನ್ನ ಗೆಳೆಯರ ಸಂಗಡ ಹೋಗಿದ್ದೀಯಂತೆ. ನಾಲ್ಕೈದು ಜನ ಹರಯದ ಹುಡುಗಿಯರೂ ಆ ಗುಂಪಿನಲ್ಲಿದ್ದರಂತೆ. ನೀನು ತೆಳ್ಳಗೆ ಉದ್ದವಾಗಿದ್ದ ಚಿನಿವಾರ ಕೋಮಿನ ಹುಡುಗಿ

ಯೊಂದನ್ನು ಮಾತನಾಡಿಸಿ, ಅದರ ಭಾವಚಿತ್ರ ಹಿಡಿದು, ಅದರೊಡನೆ ಪರಂಗಿ ಭಾಷೆಯಲ್ಲಿ ಮಾತನಾಡಿದೆಯಂತೆ. ನಟುವರನಂತೆ ನೀನು ಎಲ್ಲರ ಮುಂದೂ ಕೊಳಲೂದಿದೆಯಂತೆ. ನಿನ್ನ ಆ ಚಿನಿವಾರ ಹುಡುಗಿಯ ಸರಸಸಲ್ಲಾಪಗಳು ಬಹಳ ಹೆಚ್ಚಾಗಿವೆಯಂತೆ. ಇವನ್ನೆಲ್ಲಾ ರೂಬುರೂಬು ತಿಮ್ಮಾಬೋಯಿಯೆ ನೋಡಿದನೆಂದಮೇಲೆ ಇದರಲ್ಲಿ ಮಿಥ್ಯಕ್ಕೆ ಯೆಡೆಯಿಲ್ಲ. ಸದರಿ ಪತ್ರವನ್ನು ಬೆಳಸಲಿಕ್ಕೆ ನನಗೆ ಇಚ್ಛೆಯಿಲ್ಲ. ನೀನು ಆದಷ್ಟು ಶೀಘ್ರದಲ್ಲೇ ಇಲ್ಲಿಗೆ ಒಮ್ಮೆ ಮೂರು ದಿನ ಮೊಖ್ಖಾಂ ಬರುವುದು. ಅವಳ ತಂಗಿ ವೆಂಕಟಸುಬ್ಬಿಯನ್ನು ನೀನು ನೋಡಿದ್ದೀಯಷ್ಟೆ. ಅವಳಿಗೆ ಅರ್ಜಂಟಾಗಿ ಹಲ್ಲು ಕಟ್ಟಿಕೊಡಬೇಕಂತೆ. ಅದೂ ಅಲ್ಲದೆ, ನಿನ್ನ ಸೋದರತ್ತೆ ಮಗಳು ಅನ್ನಪೂರ್ಣೆಯನ್ನು ನಿನಗೆ ಈಗಲೇ ಮದುವೆ ಮಾಡಬೇಕೆಂದು ಇವಳು ಒತ್ತಾಯಿಸುತ್ತಿದ್ದಾಳೆ. ಆದ್ದರಿಂದ ನೀನು ಉದಾಶೀನ ಮಾಡದೆ ಬಂದು ಬಿಡು. ನೀನು ವ್ಯಾಸಂಗ ಹಾಳಾಗುವುದೆಂದು ನೆಪಹಾಕುವುದು ಬೇಡ. ಆ ವ್ಯಾಸಂಗವನ್ನು ನೀನು ಬಿಟ್ಟರೂ ಚಿಂತಿಲ್ಲ. ಏಕೆಂದರೆ, ಈ ಊರಿಗೆ ಹೊಸದಾಗಿ ಬಂದಿರುವ ಹಲ್ಲುಪುಡಿ ತಯಾರಕ ಎಂಕಪ್ಪಯ್ಯನ ಪ್ರಕಾರ ಹಲ್ಲು ಕಟ್ಟಿ, ಕೀಳುವ ವಿದ್ಯೆಯನ್ನು ಕಲಿಯಲು ಒಂದೇ ವಾರ ಸಾಕಂತೆ. ಅದೇನು ಘನಂದಾರಿ ವಿದ್ಯೆಯಲ್ಲವೆಂದು ಅವನೇ ಹೇಳಿದ. ಐದು ವರ್ಷ ಅನ್ಯಾಯವಾಗಿ ಆ ಸಣ್ಣ ವಿದ್ಯೆಯನ್ನು ಕಲಿಯಲು ಹಾಳು ಮಾಡುವುದು ನನ್ನಂಥವನ ಮಗನಿಗೆ ಧರವಲ್ಲ ಎಂದು ಖುದ್ದು ರಾಜಿಯಿಂದ ಹೇಳಿದ. ನೀನು ಇಚ್ಛೆಪಟ್ಟರೆ ಅವನೇ ಹೇಳಿಕೊಡುವುದಾಗಿಯೂ ಹೇಳಿದ. ಆದ್ದರಿಂದ ನೀನು ಈ ವಿಷಯವನ್ನೆಲ್ಲಾ ಪರಿಶೀಲಿಸಿ ವೃಥಾ ಕಾಲಹರಣ ಮಾಡದೆ, ಊರಿಗೆ ಬಂದುಬಿಡುವುದು. ಉಳಿದ ವಿಚಾರಕ್ಕೆ ನಾನು ಎಂಕಪ್ಪಯ್ಯನ ಹತ್ತಿರ ಮಾತನಾಡಿ ಎಲ್ಲಾ ಏರ್ಪಾಟುಗಳನ್ನು ಮಾಡಿರುತ್ತೇನೆ. ಇನ್ನೇನು ವಿಶೇಷವಿಲ್ಲ.

ಇಂತು ಕೋಟಿ ಆಶೀರ್ವಾದಗಳೊಡನೆ, ನಿನ್ನ ತೀರ್ಥರೂಪು

ಶ್ಯಾನುಭೋಗ್ ಶಿಂಗ್ರಯ್ಯ

ಶೌರಿ ಮತ್ತು ದೇವರು

★

ಮೇಲಿನ ಶೀರ್ಷಿಕೆಯನ್ನು ಓದುವವರು, ಅದರ ಕೆಳಗಿರುವುದೆಲ್ಲಾ ಪುರಾಣ ವೆಂದುಕೊಳ್ಳುವರೋ ಏನೋ ! ಇದು ಪುರಾಣವಲ್ಲ ಅಂತ ಮಾತ್ರ ಹೇಳಬಲ್ಲೆ.

ನಮ್ಮ ಭಾಗೀರತೀ ಚಿಕ್ಕಮ್ಮನ ಮನೆಯ ಪೂಜೆಯ ಭಟ್ಟರು—ಸುಬ್ಬಾಜೋ ಯಿಸರ ಮಗಳು ಗೌರೀನ, ಹುಡುಗಿಯ ತಾಯಿ ಪಾರ್ವತಮ್ಮನವರು ತಮ್ಮ ಅಣ್ಣನ ಮಗ ಮಹೇಶನಿಗೆ ಕೊಟ್ಟು ಮದುವೆ ಮಾಡೋದೂಂತ ಮಾತೆತ್ತಿದಾಗ, ಸುಬ್ಬಾ ಜೋಯಿಸರು ತೀವ್ರವಾಗಿ ಪ್ರತಿಭಟಿಸಿದರು. ಮಹೇಶ—ಪಿ. ಯು. ಸೀಲಿ ಮೂರು ಬಾರಿ ಪಲ್ಟಿ ಹೊಡೆದು, ಏನೇನೋ ಫಿತೂರಿ ನಡೆಸಿ ಪೋಲೀಸ್ ಸಬ್ ಇನ್ಸ್ಪೆಕ್ಟರ್ ಆಗಿದ್ದ. ಫಿತೂರಿ ನಡೆಸೋಕೆ ಆಗದಿದ್ದವನು ಸಬ್ ಇನ್ಸ್ಪೆಕ್ಟರ್ ಆಗಲಿಕ್ಕೂ ಫಿತೂರಿ ನಡೆಸೋಕೆ ತಾಕತ್ತಿಲ್ಲದವನು ಸಬ್ ಇನ್ಸ್ಪೆಕ್ಟರಾಗಿ ಉಳಿಯಲಿಕ್ಕೂ ಸಾಧ್ಯ ವಿಲ್ಲಾಂತ ಸುಬ್ಬಾ ಜೋಯ್ಸರಿಗೆ ಗೊತ್ತು. ಅದರ ಬಗ್ಗೆ ಅವರ ಅಭ್ಯಂತರವೇನಿರ ಲಿಲ್ಲ. ಆದರೆ ಮಹೇಶ ಒಬ್ಬ ನಾಸ್ತಿಕ.

ಹಿಂದೆ ಒಂದು ಬಾರಿ ಇದೇ ಮಹೇಶನನ್ನು ನಮ್ಮ ವಿಶು—ಅವರಿಬ್ಬರೂ ಸಹ ಪಾಠಿಗಳು—ವೈಗಳ್ಳರ ಸಂಘಕ್ಕೆ ಕರೆದುಕೊಂಡು ಬಂದಿದ್ದಾಗ. ಅದೂ ಇದೂ ವಿಷಯ ಮಾತಾಡ್ತಾ, ವೈಗಳ್ಳರ ಸಂಘದಲ್ಲಿ ಒಂದು ನಾಸ್ತಿಕರ ಗುಂಪೊಂದನ್ನೇಕೆ ಸ್ಥಾಪಿಸಬಾರದು ಅಂತ ಕೇಳಿದ್ದ-ಈ ಮಹೇಶ. ಅಂತಹ ಗುಂಪೊಂದನ್ನು ಸ್ಥಾಪಿಸು ವುದರಲ್ಲಿ ಕೆಲವರಿಗೆ ಆಸಕ್ತಿ ಇದ್ದರೂ ಅದಕ್ಕೆ ' ನಾಸ್ತಿಕರ ಗುಂಪು ' ಅಂತ ನಾಮಕರಣ ಮಾಡೋಕೆ ಸಂಕೋಚಪಟ್ಟು, ಆ ಯೋಜನೆ ಹಾಗೇ ಕೈಬಿಟ್ಟಿತು ಸುಬ್ಬಾ ಜೋಯಿ ಸರಿಗೆ ತಮ್ಮ ಮಗಳನ್ನು ಒಬ್ಬ ನಾಸ್ತಿಕನಿಗೆ ಕೊಡುವುದಕ್ಕೆ ಸುತರಾಂ ಇಷ್ಟವಿರಲಿಲ್ಲ. ಹಾಗಾಗಿ ಗೌರಿ ಮಹೇಶರ ವಿವಾಹ ಪಾರ್ವತಮ್ಮನ ಆಸ್ತು ಮತ್ತು ಜೋಯಿಸರ ನಸ್ತು (?) ಗಳ ಮಧ್ಯೆ ಜೋತಾಡುತ್ತಿತ್ತು.

ಸುಬ್ಬಾಜೋಯಿಸರ ಪತ್ನಿ ಪಾರ್ವತಮ್ಮ ತಮ್ಮ ಮಗಳ ಭವಿಷ್ಯವನ್ನು ಭಾಗೀರತೀ ಚಿಕ್ಕಮ್ಮನ ಮಡಿಲಲ್ಲಿ ಹಾಕಿದರು. ಭಾಗೀರತೀ ಚಿಕ್ಕಮ್ಮ ಜೋಯಿ ಸರನ್ನು ವಿಚಾರಿಸಿದಾಗ, ಪರಿಸ್ಥಿತಿಯ ನಿಜಾಂಶ ತಿಳಿಯಿತು. ಇಷ್ಟೆಲ್ಲಾ ವಿಷಯ ನಾನು ಶೌರಿ, ಸಂಕ್ರಾಂತಿ ಹಬ್ಬಕ್ಕೆ ಹೆಬ್ಬೂರಿಗೆ ಹೋಗಿದ್ದಾಗ ಭಾಗೀರತೀ ಚಿಕ್ಕಮ್ಮ ನಮ್ಮ ಮುಂದೆ ಹೇಳಿದರು.

"ಈ ಒಗಟನ್ನು ಶೌರಿಕೂಡ ಬಿಡಿಸಲಾರ." ಅಂತ ಹೇಳಿದರು ಭಾಗೀರತೀ ಚಿಕ್ಕಮ್ಮ.

ಹಿಂದೆ ಒಂದು ಬಾರಿ ನಮ್ಮ ಒಂದು ಗ್ಯಾಂಗು ಬೆಂಗಳೂರಿಂದ ತಿಪ್ಪಗೊಂಡನ ಹಳ್ಳಿಗೆ ಹೋಗುತ್ತಿದ್ದಾಗ, ದಾರಿಯಲ್ಲಿ ಸುಮಾರು ಕ್ರಿಕೆಟ್ ಪಿಚ್ಚಿನಷ್ಟು ದೂರದ ಭಾಗ, ಮಳೆಯಿಂದ ವಿಪರೀತ ಕೊಚ್ಚೆಯಾಗಿತ್ತು. ರಾಜ, ಚಂದಿ, ಶೀನಿ ಮೂವರು ನನ್ನ ಓಪೆಲ್ಲಿನಲ್ಲಿದ್ದರು. ಆ ಸಮಯದಲ್ಲಿ ಶೀನಿ ಹೇಳಿದ ಈ ಸ್ಕಿಡ್ಡನ್ನ ದಾಟೋಕೆ ಈ ಓಪೆಲ್ ಹಣೇಲೇ ಬರೆದಿಲ್ಲ ಅಂತ. ಅದಕ್ಕೆ ಚಂದಿ ಬರೆದೇ ಇಲ್ಲ ಅಂತ ಸೇರಿಸಿದ, ನನಗೆ ನಿಜಕ್ಕೂ ರೋಷ ಬಂದು, ಓಪೆಲ್‌ನ ಎರಡನೇ ಗೇರಿಗೆ ಹಾಕಿ ಆ ಹಾಳು ಸ್ಕಿಡ್ಡನ್ನ ಹಾರಿಸಿಯೇ ಹಾರಿಸಿದೆ. ರಾಜ ಚಂದಿ ಶೀನಿ ಶಹಭಾಸ್ ಕೊಟ್ಟರು ಕಾರಿಗೆ. ಕಾರಿನ ಆಕ್ಸಲ್ ರಿಪೇರಿಗೆ ನಾನು ಐವತ್ತು ರೂಪಾಯಿ ಕೊಟ್ಟೆ.

ಭಾಗೀರತೀ ಚಿಕ್ಕಮ್ಮನ ಮಾತುಕೇಳಿ ನನಗೆ ಅದೇರೀತಿ ಕೋಪ ಬಂತು.

"ಇದು ಎಂತಹ ದೊಡ್ಡ ವಿಷಯ ಚಿಕ್ಕಮ್ಮ ? ಶೌರಿ, ಕೇವಲ ಸಂಗಮ್ ಚಿತ್ರದ ಒಂದು ವಿರಾಮದ ಕಾಲದಲ್ಲಿ ಮಹೇಶನಿಗೆ ಬುದ್ಧಿ ಕಲಿಸಿ, ತಿರುಪತಿ ಯಾತ್ರೆಗೆ ಕಳುಹಿಸುತ್ತಾನೆ !" ಅಂದೆ.

"ಪ್ರಯತ್ನ ಮಾಡ್ತೇನೆ ಸರ್" ಅಂದ ಶೌರಿ.

"ಶೌರಿ, ನಿನ್ನ ಬುದ್ಧಿಯ ಪರೀಕ್ಷೆ ಇದು ! ಆ ಮಹೇಶನ ಮೆದುಳಿನ ಸ್ಥಿತಿಯನ್ನು ಮನಶ್ಶಾಸ್ತ್ರ ಪ್ರಯೋಗದಿಂದ ಪತ್ತೆ ಹಚ್ಚಿ ಆ ಮುಟ್ಠಾಳನ ಬಾಯಿಂದ 'ಅಯ್ಯೋ ಭಗವಂತಾ !' ಅನ್ನಿಸಬೇಕು ಶೌರಿ !" ಅಂದೆ.

"ನಾಸ್ತಿಕರಮೇಲೆ ಮನಶ್ಶಾಸ್ತ್ರ ಪ್ರಯೋಗವಿಲ್ಲ ಸರ್. ಏನಿದ್ದರೂ ಕೇವಲ ಗಂಡಾಂತರ ಪ್ರಯೋಗವೇ ಸಾಕು ಸರ್" ಅಂದ.

"ಸರಿ ಶೌರಿ ಎಲ್ಲಾ ನಿಂಗೇ ಗೊತ್ತು" ಅಂದ.

ಮಾರುದಿನ ಮನೆಯಲ್ಲಿ ನನ್ನ ಮಧ್ಯಾಹ್ನದ ಚಹಾ ಕೊಡುತ್ತಾ ಶೌರಿ ಹೇಳಿದ

"ಮಹೇಶರಾಯರು ಸಿಕ್ಕಿದ್ದರು ಸರ್"

"ಓಹೋ ಎಲ್ಲಿ ?"

"ಕೋಟೆ ಆಂಜನೇಯನ ಗುಡಿ..."

"ಶಹಭಾಸ್ !

"ಅಲ್ಲ ಸರ್ ಆಂಜನೇಯನ ಗುಡಿ ಮುಂದೆ ಸರ್. ಅಲ್ಲಿ ದೇವರಿಗಾಗಿ ಹಣ್ಣು ಕಾಯಿ, ಹೂ, ಕರ್ಪೂರ ಮಾರುತ್ತಿದ್ದವರನ್ನೆಲ್ಲಾ ಓಡಿಸುತ್ತಿದ್ದರು. ದೇವರಿಗಾಗಿ ಈ ದುಂದುಗಾರಿಕೆ ವ್ಯಾಪಾರವನ್ನೆಲ್ಲಾ ಕಾನೂನು ರೀತ್ಯಾ ರದ್ದು ಮಾಡಿಸ್ತಾರಂತೆ

ಸರ್, ಬಡವರ ಸುಲಿಗೆ ಆಗ್ತಾಯಿರೋದು ಈ ಮೂಕ ದೇವರುಗಳಿಂದ ಮತ್ತು ಗೊಡ್ಡು ಪೂಜಾರಿಗಳಿಂದ ಅಂತ ರೇಗ್ತಾ ಇದ್ದರು ಸರ್."

"ಆಮೇಲೆ ?"

"ಅರಮನೇನ ಮೈಸೂರಿಂದ ಕಿತ್ತಮೇಲೆ ಈ ದೇವರುಗಳನ್ನ ಕೇಳೋರ್‍ಯಾರು ಸರ್ ; ಮಹೇಶರಾಯರು ಆಡಿದ್ದೇ ಆಟ-ಸರ್."

" ಅದಿರಲಿ ಶೌರಿ, ಈಗ ಸುಬ್ಬಾಜೋಯಿಸರ ಮಗಳ ಗತಿಯೇನು ? "

" ಅದೇ ಹೇಳೋಕೆ ಬಂದೆ ಸರ್. ನಿನ್ನೆ ರಾತ್ರಿ ನಾನು ಸ್ವಲ್ಪ ರವೆ ಸಜ್ಜಿಗೆ ಮಾಡಿಕೊಂಡು, ಸ್ವಲ್ಪ ಮಂತ್ರಾಕ್ಷತೆ ಎರಡು ತುಳಸಿ ತಕೊಂಡು ಮಹೇಶರಾಯರ ಮನೆಗೆ ಹೋಗಿದ್ದೆ ಸರ್. ಹೆಬ್ಬೂರಿಂದ ಅವರತ್ತೆ ಕಳಿಸಿದ್ದು-ಸತ್ಯನಾರಾಯಣನ ಪ್ರಸಾದ ಅಂತ ಕೊಟ್ಟೆ ಸರ್. ಆ ಮಂತ್ರಾಕ್ಷತೇನ ಆ ತುಳಸೀನ ಮಹೇಶರಾಯರು ಕೈಲಿ ಕೂಡ ಮುಟ್ಟಲಿಲ್ಲ ಸರ್. ನನಗೇ ಇಟ್ಕೊಕೋ ಅಂದರು ಸರ್."

" ಆ ಸಜ್ಜಿಗೇನ ?"

" ಬಾಳೇ ಎಲೆ ಇಂದ ಹಾಗೇ ನೆಕ್ಕಿಕೊಂಡು ತಿಂದು ಎಲೇನ ಆಮೇಲೆ ಒದ್ದು ಬಿಸಾಡಿದರು ಸರ್. ಪ್ರಸಾದ ಅಂತ ಕಣ್ಣಿಗೆ ಒತ್ತಿಕೊಳ್ಳಲೇ ಇಲ್ಲ ಸರ್."

" ಪಾಪಿ ! "

" ಹೌದು ಸರ್. ಆಮೇಲೆ ಹೇಳಿದರು ಸರ್—'ನನ್ನತ್ತೇಗೆ ತನ್ನ ಮಗಳನ್ನು ನನಗೆ ಕೊಡಬೇಕು ಅಂತ ಇಷ್ಟೆಲ್ಲಾ ಉಪಚಾರ ? ಆದರೆ ನಾನು ಆ ಹುಡುಗೀನ ಮದುವೆ ಮಾಡಿಕೊಂಡ್ರೆ—ಈ ದೇವರುಗಳನ್ನೆಲ್ಲಾ ಅಮ್ಮನ ಮನೇಲೇ ಬಿಟ್ಟು ಬರ್ಬೇಕು ಅಂತ ಗೊತ್ತಿಲ್ಲ ! ಈ ಪೂಜೆಗಳನ್ನೆಲ್ಲಾ ಆ ಜೋಯಿಸನ ಪಂಚಪಾತ್ರೇಲೇ ಎಳ್ಳಿನ ಜೊತೆ ಇಟ್ಟು ಬರಬೇಕು ಅಂತ ಗೊತ್ತಿಲ್ಲ !—ದೇವರಂತೆ ದೇವರು !'—ಅಂತ ನಕ್ಕರು ಸರ್ "

" ಸಮಾಚಾರ ಒಳ್ಳೇದಕ್ಕಲ್ಲ ಶೌರಿ. "

" ಅಲ್ಲ ಸರ್–"

" ಅಂದರೆ ಒಳ್ಳೇದಕ್ಕೆ ?"

" ಒಳ್ಳೇದಕ್ಕಲ್ಲ ಸರ್. " ಅಂದ.

ನನಗೆ ಮಹೇಶನ ನಾಸ್ತಿಕತನದ (ಅಥವಾ ನಾಸ್ತಿಕತ್ವವೋ ?)—ಮಟ್ಟ ಸಂಪೂರ್ಣವಾಗಿ ಅರ್ಥವಾಗಿದ್ದು, ವಿಶು, ಈ ಮಹೇಶನ್ನ ನಮ್ಮ ಸಂಘದಲ್ಲಿ ಏರ್ಪಡಿಸಿದ್ದ ಸೋಮುವಿನ ಮದುವೆ ನಿಶ್ಚಿತಾರ್ಥದ ಪಾರ್ಟಿಗೆ, ಕರೆದುಕೊಂಡು ಬಂದಿದ್ದಾಗ. ಅದೂ ಇದೂ ಮಾತಾಡ್ತಾ, ಜಾತಕ, ಕಂಕಣಬಲ, ಮುಹೂರ್ತಗಳ ಮಾತು ಬಂತು.

" ಎಲ್ಲಾ ಶುದ್ಧ ಮೂರ್ಖ ನಂಬಿಕೆಗಳು, ನಮ್ಮ ಜ್ಯೋತಿಷಿಗಳು ಇನ್ನು ಮೇಲೆ ರಷ್ಯನರ ಚಂದ್ರಮರಿಗಳನ್ನು ಸೇರಿಸಿ ಜಾತಕ ಬರೀತಾರೇನೋ ! " ಅಂತ ಓೀಯಾಳಿಸಿದ ಮಹೇಶ.

ನನಗೆ ತುಂಬಾ ರೇಗಿತು.

" ಯಾಕಯ್ಯಾ ನೀನು ವಿಜ್ಞಾನಕ್ಕೂ ನಮ್ಮ ಪುರಾತನ ಶಾಸ್ತ್ರಗಳಿಗೂ ಸಂಬಂಧ ಕಲ್ಪಿಸ್ತಿ ? ರಷ್ಯ ಅಂದರೆ ದೇವರಿಲ್ಲದ ದೇಶ—"

" ಯಾರಿಗೆ ಬೇಕು ದೇವರು ? ಯಾರು ಆ ದೇವರು ?" ಇದಕ್ಕೆ ತಕ್ಕ ಉತ್ತರವನ್ನು ಬಿಸಿಬಿಸಿಯಾಗಿ ಕೊಡಬೇಕು ಅಂತ ಇದ್ದೆ. ಆದರೆ ಸೋಮು ಬಾಯಿ ಹಾಕಿದ.

" ಇದೇನು ಮಹೇಶ್ ? ನಿಮಗೆ ನಿಮ್ಮ ಖಾಸಾ ಸೋದರತ್ತೆಯ ಮಗಳನ್ನೇ ನಿಶ್ಚಯಮಾಡಿದ್ದಾರಂತೆ—ನಿಮ್ಮ ಮಾವ ಬಹಳ ವೈದೀಕರಂತೆ ?"

" ಡ್ಯಾಮ್ಡ್ ವೈದಿಕ್ ! ನಾನು ಆ ಹುಡುಗೀನ ಮದುವೆ ಆಗೋದಿದ್ರೆ—ಓನ್ಲಿ ರಿಜಿಸ್ಟರ್ ಮ್ಯಾರೇಜ್ ! ನನಗೆ ದೇವರು—ದಿಂಡ್ರು, ಶಾಸ್ತ್ರ, ಗೀಸ್ತ್ರ—ಏನೂ ಬೇಕಾಗಿಲ್ಲ." ಅಂದ ಮಹೇಶ.

ಶೌರಿಗೆ ವಿಷಯವನ್ನೆಲ್ಲಾ ಹೇಳಿದೆ.

" ಮಹೇಶರಾಯರ ಮನೋವಿಕಾರದ ಮಟ್ಟವನ್ನ ಕಲ್ಪನೆಕೂಡ ಮಾಡೋಕಾಗೊಲ್ಲ ಸರ್. " ಅಂದ.

ನನ್ನ ಕಲ್ಪನೆಗೇನಾದ್ರೂ ಮಾಡೋಕಾಗುತ್ತ್ಯೇ-ಅಂತ ನೋಡಿದೆ. ಶೌರಿಯ ಮಾತು ನಿಜ. ಆಗಲಿಲ್ಲ.

"ಮುಂದೇನು ಶೌರಿ ?"

"ಟಿಪ್ಪುನ ಕರೆಸೋಣ ಸರ್" ಅಂದ.

ಟಿಪ್ಪು ನಿಮಗೆ ಜ್ಞಾಪಕವಿರಬಹುದು. ಶೌರಿಯ ಅಳಿಯ ಅಂದರೆ ಕೇವಲ ಸೋದರಳಿಯ. ನೋಡಿದ ತಕ್ಷಣ ಒಂದು ತರಹ ಹುಳಿ ಹಿಂಡುವ ಆಕಾರದ ಹುಡುಗ ಅಥವಾ ಹೈದ. ಹಿಂದೆ ಹೆಬ್ಬೂರಲ್ಲಿ ಒಂದು ಬಾರಿ ಮೂರ್ತಿಗೂ ಶಿಂಗ್ರೂಗೂ ಮಧ್ಯೆ ಶಾಂತಿಸ್ಪರ್ಧೆ ಏರ್ಪಟ್ಟಿದ್ದಾಗ, ಇದೇ ಟಿಪ್ಪುವಿನ ಸಹಾಯದಿಂದ ನಮ್ಮ ಶೌರಿ ಮೂರ್ತಿಗೆ ಸುಬ್ಬಜ್ಜನಿಂದ ಶಾಂತಿಪಾರಿತೋಷಿಕವನ್ನು ಕೊಡಿಸಿದ್ದ.

"ಪ್ರಯತ್ನಮಾಡಬಹುದು ಶೌರಿ" ಅಂದೆ.

ನಾಲ್ಕು ದಿನಗಳಾದಮೇಲೆ ಒಂದು ದಿನ ಸಂಘದಿಂದ ನಾನು ಬರುತ್ತಿದ್ದಂತೆಯೇ ಶೌರಿ ಹೇಳಿದ

"ವಿಶ್ವನಾಥರಾಯರು ಬಂದಿದ್ದರು ಸರ್. ಜೊತೆಗೆ ಮಹೇಶರಾಯರೂ ಬಂದಿದ್ದರು ಸರ್."

"ಏನಂತೆ ಸಮಾಚಾರ ?

"ಮಹೇಶರಾಯರ ಮನೆಯಲ್ಲಿ ಈ ಮೂರು ದಿನಗಳಿಂದ ಒಂದೇ ಸಮನಾಗಿ ಕಳ್ಳತನವಾಗ್ತಾ ಇದೆ ಸರ್. ಮಹೇಶರಾಯರ ಪೇಟ, ಬೆಲ್ಟು, ಹ್ಯಾಟು, ಬೂಟು, ಒಂದು ಜೊತೆ ಪ್ಯಾಂಟು ಒಂದೊಂದಾಗಿ ಹೋಗಿವೆ ಸರ್. ಒಂದೊಂದಕ್ಕೂ ಬದಲಾಗಿ ಒಂದು ಪೊಪ್ಪು ತೆಂಗಿನಕಾಯಿ, ಸ್ವಲ್ಪ ಹೂ, ಒಂದು ವೀಳೇದೆಲೆಯಲ್ಲಿ ಕಪ್ಪು ಸಿಗ್ತಾ ಇದೆಯಂತೆ ಸರ್."

"ಶೌರಿ ! ಯಾರೋ ಮಹೇಶನಿಗೆ ಆಂಜನೇಯನ ಪ್ರಸಾದ ಕರುಣಿಸ್ತಾ ಇದ್ದ ಹಾಗಿದೆಯಲ್ಲಾ !"

"ಹಾಗೇ ಕಾಣುತ್ತೆ ಸರ್."

"ಅಂದಹಾಗೆ ಶೌರಿ, ಟಿಪ್ಪು ಏನಾದ ?"

"ಟಿಪ್ಪೂಗೆ ಕಾಗದ ಬರೆದಿದ್ದೇನೆ ಸರ್. ಉತ್ತರ ಬಂದಿಲ್ಲ–ಇವತ್ತು ಮಹೇಶ ರಾಯರಿಗೆ ಒಂದು ಕಾಗದ ಬಂದಿದೆ ಸರ್"

"ಎಲ್ಲಿಂದ ?"

"ಅದು ಗೊತ್ತಿಲ್ಲ ಸರ್, ಮಹೇಶರಾಯರು ತಮ್ಮ ನಡತೆಯನ್ನು ತಿದ್ದು ಕೊಳ್ಳದಿದ್ದರೆ ಆಂಜನೇಯನ ಕೋಪಕ್ಕೆ ಗುರಿಯಾಗುತ್ತಾರಂತೆ ಸರ್. ಅದರಿಂದಾಗಿ ಅವರ ತಲೆಗೆ ಸಿಡಿಲು ತಾಗುತ್ತಂತೆ ಸರ್."

"ಶೌರೀ—ಯಾರೋ ಈ ಮಹೇಶನಿಗೆ ಡಿ. ಎಂ. ಕೆ. ಮಾಡ್ತಾ ಇದ್ದಹಾಗಿದೆ ! ಆ ಕಾಗದ ಎಲ್ಲಿದೆ ?"

"ಮಹೇಶರಾಯರು ಓದಿದಮೇಲೆ, ತಮ್ಮ ಸಿಬ್ಬಂದಿಯಲ್ಲಿದ್ದ ಇಬ್ಬರು ಪ್ಯಾದೆ ಗಳಿಗೆ ಓದಿ ಹೇಳಿ, ಕಾಗದವನ್ನು ಚೂರು ಚೂರು ಮಾಡಿ ತಮ್ಮ ಎಕ್ಕಡದ ಕಾಲಿನಿಂದ ಒದ್ದರಂತೆ ಸರ್. ಅವರ ಬೂಡ್ಸು ಕಳುವಾಗಿದೆ."

"ಶೌರಿ—ವಿಷಯ ಎಚ್ಚರಿಕೆಯಿಂದ ನೋಡ್ತಿರು" ಅಂದೆ.

ಈ ನಡುವೆ ಪತ್ರಿಕೆಗಳಲ್ಲಿ ಬರುತ್ತಿರುವ ನಾನಾ ಚಳುವಳಿಗಳ ಸಮಾಚಾರ ಓದಿದರೆ ಯಾವುದು ನಿಜ ಯಾವುದು ಸುಳ್ಳು-ಹೇಳೋಕೇ ಬರೊಲ್ಲ. ಈಗ ಮಹೇಶ ನಿಗಾಗ್ತಿರೋ ತಾಪತ್ರಯಗಳನ್ನು ನೋಡಿದರೆ ಅವು ವೈಯಕ್ತಿಕವೊ ರಾಜಕೀಯವೋ ಯಾವುದೂ ಅರ್ಥವಾಗಲಿಲ್ಲ.

"ವಿಶ್ವನಾಥರಾಯರು ಇವತ್ತು ರಾತ್ರಿ ನನ್ನನ್ನು ಮಹೇಶರಾಯರ ಮನೆಯಲ್ಲಿ ಮಲಗಲು ಹೇಳಿದ್ದಾರೆ ಸರ್. ಮಹೇಶರಾಯರು ಈ ಕೆಲವು ಘಟನೆಗಳಿಂದಾಗಿ ಸ್ವಲ್ಪ ದಿಗ್ಭ್ರಮೆಯಾಗಿದ್ದಾರಂತೆ ಸರ್."

" ಹೋಗು ಶೌರಿ. ನನಗೂ ಕುತೂಹಲವಾಗಿವೆ." ಅಂದೆ.

ಮರುದಿನ ಬೆಳಿಗ್ಗೆ ತನ್ನ ನೈಟ್-ಡ್ಯೂಟಿ ಮುಗಿಸಿ ಮನೆಗೆ ಬಂದಾಗ, ಶೌರಿಯ ಹಣೆಯಮೇಲೆ ಆಂಜನೇಯನ ಕಪ್ಪಿತ್ತು.

ಕೋಟೆದೇವಸ್ಥಾನಕ್ಕೆ ಹೋಗಿದ್ದೆಯಾ ಶೌರಿ ?"

"ಇಲ್ಲ ಸರ್. ನಿನ್ನೆ ರಾತ್ರಿ ಸುಮಾರು ಸಂಪೂರ್ಣರಾಮಾಯಣದಲ್ಲಿ ಸುಗ್ರೀವನ ಪರಿಚಯ ಆಗುವ ಸಮಯ ಸರ್ ಯಾರೋ ಮಹೇಶರಾಯರ ಮನೆ ಬಾಗಿಲು ತಟ್ಟಿದರು ಸರ್ ಯಾರು ಅಂದೆ. ಪಿ ಸಿ. ನಾನೂರಿಪ್ಪತ್ತು ಅಂತ ಧ್ವನಿ ಕೇಳಿತು. ಬಾಗಿಲು ತೆರೆದೆ ನನ್ನ ಮುಖ ಈಚೆಗೆ ಹಾಕಿದೆನೋ ಇಲ್ಲವೋ ಒಂದು ದೊಡ್ಡ ಕಪಿ ಸರ್ ನನ್ನ ಮುಖಕ್ಕೆ ಇದನ್ನ ಹಚ್ಚಿ ತನ್ನ ಬಂಗೈಯಿಂದ ತನ್ನ ಬಾಲದ ತುದಿ ಹಿಡಿದು ನನ್ನ ತಲೆಯಮೇಲೆ ಹೊಡೆದು ಓಡಿತು ಸರ್. ನಾನು ಹೆದರಿ ಮಹೇಶರಾಯರನ್ನ ಎಬ್ಬಿಸಿದೆ ಸರ್. ಎಷ್ಟು ಹುಡುಕಿದರೂ ಏನೂ ಸಿಗಲಿಲ್ಲ ಸರ್...ಮಹೇಶರಾಯರು ನಕ್ಕರು ಸರ್."

ನಾನು ನಗು ನಿಲ್ಲಿಸಿದೆ.

"ಶೌರಿ ನೋಡಿದರೆ ಮಹೇಶನಿಗೆ ಯಾವುದೋ ಭೇತಾಳ ಬೆನ್ನು ಹತ್ತಿದ ಹಾಗಿದೆ !"

"ಹಾಗೇ ಕಾಣುತ್ತೆ ಸರ್. ಇವತ್ತು ನನ್ನನ್ನು ಬರಹೇಳಿದ್ದಾರೆ ಸರ್, ಮನೆಯ ವರಾಂಡಾದಲ್ಲಿ ಇಬ್ಬರು ಪಿ. ಸಿ. ಗಳು ಬಂದೂಕು ಸಹಿತ ಕಾವಲಿರುತ್ತಾರೆ ಸರ್ !

ಮರು ದಿನ ಬೆಳಿಗ್ಗೆ ಶೌರಿಯ ರಿಪೋರ್ಟಿಗಾಗಿ ಕಾದಿದ್ದೆ. ಅವನು ಬಂದಾಗ ಮಾರ್ನಿಂಗ್ ಷೋ ಹೊತ್ತಾಗಿತ್ತು. ಅವನ ಬಲಗೈ ತೂಗು ಬ್ಯಾಂಡೇಜಿನಲ್ಲಿತ್ತು. ಮುಖದಮೇಲೆ ಕಪ್ಪಿತ್ತು.

"ದೊಡ್ಡಾಸ್ಪತ್ರೆಯಿಂದ ಬಂದೆ ಸರ್."

"ಏನು ಸಮಾಚಾರ ಶೌರಿ ?"

ನಿನ್ನೆ ರಾತ್ರಿ ಪುನಃ ಆಂಜನೇಯನ ದರ್ಶನವಾಯ್ತು ಸರ್ ನಿನ್ನೆ ರಾತ್ರಿ ಮಹೇಶರಾಯರ ಮನೆಯಲ್ಲಿ ದೀಪಗಳು ಕೂಡ ಕೆಟ್ಟುಹೋಗಿತ್ತು ಸರ್. ಸುಮಾರು ಅದೇ ಸಮಯ ಸರ್. ಬಾಗಿಲು ತಟ್ಟಿದ ಶಬ್ದವಾಯ್ತು ಸರ್. ಮಹೇಶರಾಯರು ಎದ್ದು ಬಾಗಿಲು ತೆರೆದರು. ಸರ್. ನಾನು ಅವರ ಹಿಂದೆಯೇ ಇದ್ದೆ. ಏನೂ ಕಾಣ ಲಿಲ್ಲ. ಮಹೇಶರಾಯರ ಮುಖಕ್ಕೆ ಆ ಆಕಾರ-ಏನೋ ಮಾಡಿತು ಸರ್. ಓಡಿತು ಸರ್. ಮಹೇಶರಾಯರು ಓಡಿದರು ಸರ್. ನಾನೂ ಹಿಂದೆಯೇ ಓಡಿದೆ ಸರ್. ದೊಡ್ಡ ಬಸ್ ಸ್ಟ್ಯಾಂಡಿನ ಹತ್ತಿರವಿರೋ ಮರವನ್ನ ಆ ಭೂತ ಹತ್ತಿದ ಹಾಗಾಯ್ತು

ಸರ್. ಮಹೇಶರಾಯರು ಅದರ ಅಡಿಯಲ್ಲಿ ನಿಂತು ತಮ್ಮ ಶಿಳ್ಳೆ ಊದಿದರು ಸರ್. ಆಗಲೇ ಎಲ್ಲಿಂದಲೋ ಒಂದು ಭಾರಿ ಸ್ಫೋಟನೆ ಶಬ್ದವಾಯ್ತು. ಮರುಕ್ಷಣವೇ ಮಹೇಶರಾಯರು—ಭಗವಂತಾ! ಅಂತ ಮೂರ್ಛೆ ಹೋದರು ಸರ್. ಅಷ್ಟರಲ್ಲಿ ನೈಟ್ ಡ್ಯೂಟೀಲಿದ್ದ ಪಿ. ಸಿ ಗಳು ಮೂರು ಜನ ಕಣ್ಣುಜ್ಜಿಕೊಳ್ಳುತ್ತಾ ಅಲ್ಲಿಗೆ ಬಂದರು ಸರ್. ಮಹೇಶರಾಯರನ್ನು ತೋರಿಸಿದೆ ಸರ್. ನನ್ನನ್ನು ಗುಮಾನಿ ಮೇಲೆ ಹಿಡಿದರು ಸರ್. ಸಧ್ಯ–ಪಿ. ಸಿ ಗಣಪತಿರಾಯನೂ ಇದ್ದ–ನನ್ನ ಗುರುತು ಹಚ್ಚಿದ. ಎಲ್ಲರೂ ಸೇರಿ ಮಹೇಶರಾಯರನ್ನು ಆಸ್ಪತ್ರೆಗೆ ಸಾಗಿಸಿದೆವು ಸರ್, ಇವತ್ತು ಬೆಳಿಗ್ಗೆ–ಅವರಿಗೆ ಜ್ಞಾನ ಬಂದಿದೆ ಸರ್."

" ಮಾತಾಡಿದನೇನು !"

" ಅಲ್ಪಸ್ವಲ್ಪ ಸರ್. ಸಿಡಿಲು-ಸಿಡಿಲೂ!—ಅಂತ ಕೂಗಿದರು ಸರ್ "

" ಆಮೇಲೆ "?

" ಕಾಫಿ ಕುಡಿಸಿದೆವು ಸರ್. ಅವರ ಜ್ಞಾನ ಇನ್ನೂ ಸ್ವಲ್ಪ ಸುಧಾರಿಸಿದ ಮೇಲೆ–ತಮಗೆ ಆದ ಶಿಕ್ಷೆ ಹನುಮಂತದೇವರ ಪ್ರತೀಕಾರ ಅಂತಾರೆ ಸರ್.

" ನಿನ್ನ ಕೈ ಏನಾಗಿದೆ ?"

"ಏನಾಗಿಲ್ಲ ಸರ್ ನಮ್ಮ ಟಿಪ್ಪು, ಕ್ಷಮಿಸಿ ಸರ್, ಆಂಜನೇಯ"

ನನಗೆ ಇದ್ದಕ್ಕಿದ್ದ ಹಾಗೆ ಮೆದುಳಲ್ಲಿ ಏನೋ ಸಿಡಿಲು ಹೊಡೆದ ಹಾಗಾಯ್ತು.

"ಶೌರೀ !"

"ಸರ್ ?"

"ನಿಜ ಹೇಳು ಆಂಜನೇಯ ಯಾರು ?"

"ಟಿಪ್ಪು ಸರ್"

"! ?"

"ಹೌದು ಸರ್, ಅವನೇ ಈಗ ಐದಾರು ದಿನಗಳಿಂದ ಮಹೇಶರಾಯರಿಗೆ ಎರಡು ಮೂರು ಕಳ್ಳಭಟ್ಟಿ ಕೇಸುಗಳನ್ನ ತೋರಿಸಿಕೊಟ್ಟು ಅಚ್ಚುಮೆಚ್ಚಾಗಿದ್ದ. ಆ ಕಳ್ಳ ತನಗಳು ಆ ಕಾಗದ ಎಲ್ಲಾ ಟಿಪ್ಪುದೇ ಸರ್ "

"ಅರ್ಥವಾಯ್ತು ಶೌರಿ ಆದರೆ ಆ ಕಾವಲಿದ್ದ ಪೋಲೀಸರೆಲ್ಲಿ ಹಾಳಾದರು ?"

"ಅವರ ಹಣೆಗಳಮೇಲೂ ಕಪ್ಪು ಹಚ್ಚಿತ್ತು ಸರ್. ಅವರುಗಳ ಕೈಕಾಲುಗಳು ಹಗ್ಗದಿಂದ ಕಟ್ಟಿತ್ತು ಸರ್ ಆದರೆ . "

"ಆದರೆ ?" .

"ಅವರಿಗೆ ತಲಾ ಇಪ್ಪತ್ತೈದು ರೂಪಾಯಿಗಳನ್ನ ಕೊಟ್ಟಿದ್ದೆ ಸರ್. ಭಾಗೀರತಮ್ಮನವರು ಕೊಟ್ಟಿದ್ದರು."

"ಆದರೂ ಶೌರಿ. ಆ ಸಿಡಿಲಿನವಿಷಯ ಇನ್ನೂ ನಂಗರ್ಥವಾಗಿಲ್ಲ."

"ಬೆಳ್ಳುಳ್ಳಿ ಪಟಾಸ್ ಸರ್. ಮಹೇಶರಾಯರು ಶಿಳ್ಳೆ ಊದಿದಾಗ ನಾವೇ ಅವರ ಹಿಂದೆ ಹಾರಿಸಿದೆ

ಅವರಿಗೆ ಜ್ಞಾನ ತಪ್ಪಿದ್ದು ಇದರಿಂದ ಸರ್"

ಅನ್ನುತ್ತಾ ತನ್ನ ಕಿಸೆಯಿಂದ ಒಂದು ರಬ್ಬರ್ ಯಂತ್ರ ತೆಗೆದ.

" ಇದಕ್ಕೆ ಕೆಟಪ್ಟ್' ಅಂತಾರೆ ಸರ್ "

ನಾನೇನೂ ಮಾತಾಡಲಿಲ್ಲ.

" ಸರ್ "

" ಏನು ಶೌರಿ ? "

" ಈಗ ಸ್ನಾನ ಮುಗಿಸಿ ನಾನು ಕೋಟೆ ಆಂಜನೇಯಸ್ವಾಮಿ ಗುಡಿಗೆ ಹೋಗಬೇಕು ಸರ್. ಪೂಜೆ ಮಾಡಿಸಿ, ಪ್ರಸಾದವನ್ನ ಆಸ್ಪತ್ರೆಗೆ ತೆಗೆದುಕೊಂಡು ಹೋಗಬೇಕು—ಮಹೇಶರಾಯರಿಗೆ ಊಟಕ್ಕೆ ಮುಂಚೆಯೇ ಪ್ರಸಾದ ಬೇಕಂತೆ.

" ಸರಿ ಶೌರಿ " ಅಂದೆ.

—ಕೇಫ



"ಯಾಕಪ್ಪಾ ? ಹೀಗೆ ವಕ್ರವಕ್ರವಾಗಿ ಅಳ್ತಾ ಇದ್ದಿ ?"

ಜನವರಿ ೨೬ ಆಯ್ತಲ್ಲ, ಮಾಸ್ತರೇ ! ಹಿಂದೀಲಿ ಅಳ್ತಾ ಇದ್ದೀನಿ"

ರಂಗಾಭಟ್ಟರು ರಂಗಾಪುರದ ವಿಜ್ಞಾನ ಕೇಂದ್ರಕ್ಕೆ ಭೇಟಿಯಿತ್ತಾಗ.......

ಘನತೆವೆತ್ತ ಸರ್ಕಾರದವರು ಆದರಲ್ಲೂ ಭಾರತ ಸರ್ಕಾರದವರು ಅಂತೂ ಇಂತೂ ಏಳು ವರ್ಷಗಳತನಕ ಹೋರಾಟದ ಫಲವಾಗಿ ನಮ್ಮೂರಿಗೆ ಪ್ರಯೋಗಕ ವ್ಯವಸಾಯ ವಿಜ್ಞಾನ ಕೇಂದ್ರವೊಂದನ್ನು ಮಂಜೂರುಮಾಡಿದರು. ಈ ಸುದ್ದಿ ಕೇಳಿ ಆ ಊರಿನ ಜನ ಹಿಗ್ಗಿ ಹೀರೆಕಾಯಿಯಾಗಿ, ಕುಣಿದು ಕುಪ್ಪಳಿಸಿ ನಲಿದಾಡಿದರು. ರಂಗಾಪುರದ ರೈಲು ನಿಲ್ದಾಣ, ಬಸ್ ನಿಲ್ದಾಣ, ಆಸ್ಪತ್ರೆ, ಊರಿನ ಏಕಮಾತ್ರ ಕಬ್ಬಣ್ಣನ ಫಲಹಾರಮಂದಿರ ಮತ್ತು ರಂಗನ ಪ್ಯಾರಿಸ್ ಹೇರ್‌ಕಟಿಂಗ್ ಸೆಲೂನ್‌ಗಳಿಗೆ ಸುಮಾರು ೧೦೦ ಗಜ ದೂರದಲ್ಲಿರುವ ಹಳೆ ಕಾಲದ ಜಹಗೀರ್‌ದಾರರ ಬಂಗಲೆಯಲ್ಲಿ ಈ ಸಂಸ್ಥೆ ಪ್ರಾರಂಭವಾಯಿತು. ಜಹಗೀರ್‌ದಾರರ ಶ್ರೀಮಂತಿಕೆ ಜೀರ್ಣಾವಸ್ಥೆಯಲ್ಲಿತ್ತು. ಆ ಕಟ್ಟಡಕ್ಕೆ ಸುಣ್ಣ ಹೊಡೆಸಲು ಬೇಕಾದ ಕೂಲಿಕೊಡಲು ಅವರ ಬಳಿ ಕಾಸಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ತಿಂಗಳಿಗೆ ೧೦೦ ರೂ. ಬಾಡಿಗೆ ಆ ದೆವ್ವದ ಅರಮನೆಗೆ ಈ ಸಂಸ್ಥೆಯವರು ಕೊಡುವರೆಂದಾಗ "ಕಂಡು ಕಂಡು ಧನ್ಯನಾದೆ" ಎಂದು ಅವರು ಸಂತೋಷಪಟ್ಟರು.

ಡಾ। ಸ್ಯಾಮುಯೇಲ್ ಆ ಸಂಸ್ಥೆಯ ನಿರ್ದೇಶಕರಾದರು. ಅವರು ತಮ್ಮ ಪೂರ್ವಭಾವಿ ಸಿಬ್ಬಂದಿಯೊಡನೆ ರಂಗಾಪುರಕ್ಕೆ ಆಗಮಿಸಿದಾಗ ಸರ್ಕಸ್ ಕಂಪೆನಿಯೊಂದು ಬಂದಂತೆ ಜನಗಳಿಗೆ ಭಾಸವಾಗಿರಬೇಕು. ಅಂತಹ ವಿಚಿತ್ರ ವೇಷಗಳ ಹಾಗೂ ಸಾಮಾನು ಸರಂಜಾಮುಗಳ ತಂಡವದಾಗಿತ್ತು.

ಸುಮಾರು ಎರಡು ವರ್ಷಗಳ ದುಡಿಮೆ ಮತ್ತು ಪರಿಶೋಧನೆಗಳು ಅಲ್ಲಿ ನೆರವೇರಿದರೂ ಆ ಊರಿನ ಜನಗಳಿಗೆ ಆ ಸಂಸ್ಥೆಯನ್ನು ಕುರಿತು ಅಷ್ಟಾಗಿ ಒಳ್ಳೆಯ ಆದರ, ಹಾರ್ದಿಕ ಸಂಬಂಧ, ಮೂಡಲಿಲ್ಲ. ಡಾ। ಸ್ಯಾಮುಯೆಲ್ ಚಾಣಾಕ್ಷರು. ಅವರಿಗೊಂದು ಸೂಚನೆ ಹೊಳೆಯಿತು. "ಇರಲಿ ಈ ಸವಾಲು ನೋಡೋಣ" ಎಂದು ಧೃಡ ನಿರ್ಧಾರದಿಂದ ದೆಹಲಿಗೆ ಪ್ರಯಾಣ ಬೆಳೆಸಿ ಸರ್ಕಾರದ ಅನುಮತಿ ಪಡೆದು ಸಂಪರ್ಕಾಧಿಕಾರಿಯ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಿದರು.

ನೂರಾರು ಅರ್ಜಿಗಳು ಬಂದವು. ಅವರಿಗೆ ಅದೇ ಜಿಲ್ಲೆಯ ಏಕಮಾತ್ರ ಅರ್ಜಿದಾರ ಹಾಗೂ ವಿಜ್ಞಾನ ಪದವೀಧರನಾದ ನಾನು ಇಂಟರ್‌ವ್ಯೂನಲ್ಲಿ ಅಷ್ಟು ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗದೇ ಹೋದರೂ ನನ್ನನ್ನೇ ಆ ಹುದ್ದೆಗೆ ಅವರು ನೇಮಿಸಿದರು. ನಾನು ಹುದ್ದೆಗೆ ಹಾಜರಾದ ದಿನ ನನಗೆ ನನ್ನ ಇತಿ–ಮಿತಿ, ಜವಾಬ್ದಾರಿಗಳ ಬಗ್ಗೆ **'one man Seminar'** ಎರಡು ಗಂಟೆಗಳ ಕಾಲ ದಯಪಾಲಿಸಿದರು.

ಅಲ್ಲಿಂದ ಹೊರಬೀಳುವಾಗ ನನಗೆ ಆಕಳಿಕೆ, ಬೇಸರಿಕೆ ಬಂದಿತ್ತು, ಒಟ್ಟಿನಲ್ಲಿ ಅವರ ಭೀಷಣ ಭಾಷಣದ ಸಾರಾಂಶವಿಷ್ಟು. ಪ್ರಮುಖವಾಗಿ ಊರಿನ ಜನರಲ್ಲಿ ಈ ಸಂಸ್ಥೆಯನ್ನು ಕುರಿತು ಸದ್ಭಾವನೆ ಮೂಡಿಸಿ, ಅವರು ಆಸಕ್ತಿ ವಹಿಸುವಂತೆ ಮಾಡುವುದು. ಪರಿಶೋಧನೆಗಳ ಫಲಿತಾಂಶಗಳ ಲಾಭದ ಸದುಪಯೋಗಕ್ಕೆ ಉತ್ತಮ ರೀತಿ ಊರಿನಲ್ಲಿ ದಾರಿಮಾಡಿಕೊಡುವುದು ಎಂದು ನನಗನಿಸಿತು.

ಭವ್ಯವಾದ ಕೊಠಡಿ (ಕ್ಷಮಿಸಿ. ನಮ್ಮ ಮನೆಗೆ ಸುಣ್ಣ ಬಣ್ಣ ಮಾಡಿಸಲು ಪ್ರಯತ್ನಿಸಿದರೆ ಕಟ್ಟಡಕ್ಕೆ ಅಪಾಯವಾಗಬಹುದು.) ನೆಲಕ್ಕೆ ರತ್ನಗಂಬಳಿ ; ಸೊಗಸಾದ ಟೇಬಲ್, ಕುರ್ಚಿ. ಗಾಡ್ರೆಜ್ ಆಲ್‌ಮೈರಾ, ಸಾಲದ್ದಕ್ಕೆ ಎರಡು ದಿಕ್ಕುಗಳಿಂದ ಯಾರಿಗೂ ಪ್ರಾಯಶಃ ಗೊತ್ತಾಗದಂತೆ ಬೀಸುವ ವಿದ್ಯುತ್ ಪಂಖದ ಗಾಳಿ ; ಹಿತವಾದ ಮಧುರಗಾಳಿ. ಕರೆಗಂಟೆ ಒತ್ತಿದಾಗ 'ಬುದ್ಧಿ' ಎಂದು ಒಳಗೆ ಧಾವಿಸುವ ದವಾಲಿ ದಫೇದಾರ ಮಾದ-ಮತ್ತೊಂದು ಕರೆಗಂಟೆ ಒತ್ತಿದರೆ ಪರಿಮಳ ಬೀರುತ್ತಾ ಲತೆಯಂತೆ ಬಳುಕುತ್ತ, ಮೆಲುದನಿಯಲ್ಲಿ 'Yes Sir' ಎಂದು ಆಗಮಿಸುವ ಮಿಸ್ ಗೀತಾ. ಇವೆಲ್ಲಕ್ಕಿಂತ ಹೆಚ್ಚಾಗಿ ನನ್ನ ಬಳಕೆಗೆಂದೇ ಮೀಸಲಾಗಿರುವ ಹೊಸದಾದ ಟೆಲಿಫೋನ್ ರಿಸೀವರ್. (ಎಲಾ, ಈ ಪೊದ್ದು ಮಧುಗೆ ಇಂತಹ ಯೋಗ ಸಿಕ್ತಲ್ಲ, ಅವನ ಜತೆ ನಾನು ಹುಡುಗನಾಗಿದ್ದಾಗ ದಾರದ ಟೆಲಿಫೋನ್‌ನಲ್ಲಿ ಮಾತಾಡ್ತಿದ್ದ ಲ್ಲಾ ಎನ್ನು ತ್ತಾನೆ, ಹೋತದ ಗಡ್ಡದ ವಾಮನಮೂರ್ತಿ)

ನನಗೆ ಈ ಜಗತ್ತು ತೀರ ಅಪರಿಚಿತ. ಮೊದಲ ದಿನ ಕಛೇರಿ ಪ್ರವೇಶಿಸಿ, ಟೇಬಲ್‌ಗೆ ನಮಸ್ಕರಿಸಿ, ಕುರ್ಚಿಯನ್ನು ಕಣ್ಣಿಗೊತ್ತಿಕೊಂಡು, ಟೆಲಿಫೋನ್ ಕೈ ಹಿಡಿದಾಗ ನಾನು ಸ್ವರ್ಗಲೋಕದಲ್ಲಿರಬೇಕೆನಿಸಿತು.

ನಾನು ಈ ಉದ್ಯೋಗದಲ್ಲಿ ಸುಮಾರು ಒಂದು ತಿಂಗಳು ಸರ್ವಿಸ್ ಮುಗಿಸಿರ ಬಹುದು. ಒಂದು ದಿನ ಕಛೇರಿಗೆ ಬಂದು ಕುಳಿತು ಹತ್ತು ನಿಮಿಷಗಳಂ ಕಳೆದಿರಬಹುದು. ಮೇಜಿನ ಮೇಲಿನ ಟೆಲಿಫೋನಿನ ಗಂಟೆ ಬಾರಿಸಿತು. ಅದನ್ನು ಕೈಯಲ್ಲಿ ಹಿಡಿದು ಕಿವಿಯ ಬಳಿಗೆ ಸರಿಸಿದೆ.

Sir, there is a visitor to see you and the Research Station : May I send him please ? ಅಲೆ ಅಲೆಯಾಗಿ ಹೊರಬಿದ್ದಿತು. ಗೀತಳ ಮಂಜುಳನಿನಾದ.

'Alright' ಎಂದು ಟೆಲಿಫೋನ್ ಕೆಳಗಿಟ್ಟೆ.

ಒಂದೆರಡಂ ನಿಮಿಶಗಳು ಕಳೆದಿರಬಹುದು. ಆಜಾನುಬಾಹು ದೇಹ, ಶ್ಯಾಮಲ ವರ್ಣ, ವಿಭೂತಿ ಹರಡಿದ ವಿಶಾಲ ಹಣೆಯು, ಶಾಲು ಹೊದೆದ, ವ್ಯಕ್ತಿಯೊಂದು ದೇಶಾವರಿ ನಗೆ ಬೀರಂತ್ತಾ ಒಳಗೆ ಬಂದಿತು.

ಅವರು ಕೈ ಜೋಡಿಸಿ ..ನಾನು ಮಾತನಾಡುವುದಕ್ಕೆ ಅವಕಾಶ ಕೊಡದೆ,

" ಓಹೋ ತಾವೇನೋ, ಇಲ್ಲಿ ಹೊಸ ಅಧಿಕಾರಿಗಳು ? ತಮ್ಮ ಭೇಟಿ ನನಗೆ ಪರಮ ಸಂತೋಷ ನೀಡಿದೆ. ನಾನು ಅಂದ ಹಾಗೆ ಈ ಊರಿನ...ಕುಲ ಪುರೋಹಿತ ರಂಗಾಭಟ್ಟ..."ಎಂದು ತಮ್ಮ ಊರು, ಜನ ಇವುಗಳನ್ನು ಕುರಿತು ಸುಮಾರು ಅರ್ಧ ಘಂಟೆ ಉಪನ್ಯಾಸ ಬಿಗಿದರು. ಪ್ರಾಯಶಃ ಆ ವೇಳೆಗೆ ಅವರಿಗೆ ಸುಸ್ತಾಗಿರಬೇಕು. ..ಅಂದಹಾಗೆ ಕ್ಷಮಿಸಬೇಕು.

"ನಾನು ಸ್ವಲ್ಪ ಹಳೆಯ ಕಾಲದ ಮನುಷ್ಯ...ಅಂದ ಹಾಗೆ ತಮ್ಮ ನಾಮಧೇಯ ಪರಿಚಯವಾಗಲಿಲ್ಲ" ಎಂದರು.

"ನಾನು ಮಧುಸೂದನ. ಈ ಸಂಸ್ಥೆಯ ಸಂಪರ್ಕಾಧಿಕಾರಿ. ಎಂದೆ"

"ಸಂತೋಷ. ತರುಣರು ವಿದ್ಯಾವಂತರು ನಮ್ಮೂರಿಗೆ ಬರುವುದೇ ಅಪರೂಪ" ಎಂದು ದೇಶಾವರಿ ನಗೆಬೀರಿ .."ಅಂದಹಾಗೆ" ಎಂದು ಒಂದು ನಿಮಿಷ ಸ್ತಬ್ಧರಾದರು.

ನನಗೆ ಉತ್ಸಾಹ ಮೂಡಿತು. ನಮ್ಮ ಸಂಸ್ಥೆಯ ಕಾರ್ಯ ಚಟುವಟಿಕೆಗಳು ಜನತೆಗೆ ಅದು ಮಾಡಿರುವ ಮತ್ತು ಮಾಡಲಿರುವ ಮಹೋಪಕಾರಗಳನ್ನು ಕುರಿತು ಸುದೀರ್ಘಭಾಷಣ ಪ್ರಾರಂಭಿಸಿದೆ. ಮುಗಿಸಿದಾಗ ಮಾತ್ರ ನಾನು ಈ ಲೋಕಕ್ಕೆ ವಾಪಸ್ಸು ಬಂದೆ. ತಿರುಗಿ ನೋಡಿದರೆ ಭಟ್ಟರು ಗೊರಕೆ ಹೊಡಿಯುತ್ತಾ ನಿದ್ರೆ ಹೋಗುತ್ತಿದ್ದಾರೆ.

ಆ ನಿಮಿಷ ನನಗನಿಸಿತು. ಅವರನ್ನು ಅಲ್ಲಿಂದ ಕತ್ತು ಹಿಡಿದು ಹೊರಗೆ ದಬ್ಬಬೇಕೆಂದು.

ಆ ವೇಳೆಗೆ ಟೆಲಿಫೋನ್ ಗಂಟೆ ಬಾರಿಸಿತು...ಸರಿ ಭಟ್ಟರಿಗೆ ಎಚ್ಚರವಾಯಿತು. ಕಣ್ಣುಜ್ಜಿಕೊಳ್ಳುತ್ತಾ "ಅಂದಹಾಗೆ...ತಾವು ವಿದ್ಯಾವಂತರು, ಉತ್ಸಾಹಿಗಳು" ಎಂದಾಗ ನನ್ನ ಮುಖಕ್ಕೆ ಮಸಿ ಬಳಿದಂತಾಯಿತು.

"ಅಂದಹಾಗೆ ತಮ್ಮ ಕುಟುಂಬ ಯಾವಾಗ ದಯಮಾಡಿಸ್ತಾರೆ...ಎಂತಹ ಅನ್ಯಾಯ...ತಮ್ಮ ಯೋಗಕ್ಷೇಮ ಊರಿನ ಹಿರಿಯನಾಗಿ ವಿಚಾರಿಸಲಿಲ್ಲ ಕ್ಷಮಿಸಬೇಕು ವಯಸ್ಸಾಯಿತು. ಅಪಚಾರವಾಯಿತು" ಎಂದರು.

"ಇಲ್ಲಾ, ನಾನಿನ್ನೂ ಮದುವೆಮಾಡಿಕೊಂಡಿಲ್ಲ" ಎಂದೆ.

"ಸರಿ . ಸರಿ . ಬಹಳ ಸಂತೋಷ...ಅಂದಹಾಗೆ ತಾವು ಕಮ್ಮೆಗಳೊ... ಕರ್ಣಾಟಕರೋ ಅಪ್ಪಣೆ ಕೊಡಿಸುವಿರಾ" ಎಂದರು, ಉತ್ಸಾಹದ ದನಿಯಲ್ಲಿ ಭಟ್ಟರು.

ನನಗೇಕೋ ವಿಪರೀತವೆನಿಸಿತು. ಆದರೂ ತಾಳ್ಮೆಯಿಂದ "ನೋಡಿ ಈಗ ನನಗೆ ಈ ವಿಷಯ ಚರ್ಚಿಸಲು ಸಾಧ್ಯವೇ ಇಲ್ಲ ಪುರಸೊತ್ತೂ ಇಲ್ಲ. ಖಾಸಗಿ ವಿಷಯ ನೀವು ಮಾತನಾಡಬೇಕಾದರೆ ಸಂಜೆ ಬಂದು ನನ್ನನ್ನು ಭೇಟಿ ಮಾಡಿ...ದಯವಿಟ್ಟು ಈಗ ತೊಂದರೆಮಾಡಬೇಡಿ" ಎಂದೆ.

"ಸರಿ. .ಸರಿ...ನನಗೂ ವೇಳೆಯಾಯಿತು .ತಮ್ಮನ್ನು ನೋಡಿದರೆ ಈ ಎರಡು ಗುಂಪಿನವರ ಪೈಕಿಯವರೇ ಅನಿಸುತ್ತೆ . ಅಂದಹಾಗೇ.. ಒಂದು ಮಾತು...ತಮ್ಮ ಗೋತ್ರ?" ಎಂದರು

ಬೇಸರದಿಂದ ನಾನು "ವಿಜ್ಞಾನ ಗೋತ್ರ" ಎಂದು ಅವರ ಕಡೆ ತಿರುಗದೇ ನನ್ನ ಕೆಲಸದ ಕಡೆಗೆ ಗಮನವಿಟ್ಟೆ.

"ಸ್ವಾಮಿ. ನಾನು ಹೊರಡುತ್ತೇನೆ . ಅಂದ ಹಾಗೆ ಈ ರಂಗಾಭಟ್ಟನ ಸಹವಾಸ ನಿಮಗೆ ಒಂದಲ್ಲ ಒಂದು ದಿನ ಅನಿವಾರ್ಯವಾಗಿ ಆಗಲೇ ಆಗುತ್ತದೆ. ಲಕ್ಷ್ಮೀನಾರಾಯಣರಂತೆ ದಂಪತಿಗಳಾಗಿ ತಾವು ಬಾಳುವಾಗ ನಾನು ನೋಡಿ ಸಂತೋಷ ಪಡ್ತೇನೆ" ಎಂದು ಅಲ್ಲಿಂದ ಹೊರಬಿದ್ದರು.

ನಗಬೇಡಿ. ಈಗ ರಂಗಾಭಟ್ಟರ ಮಗಳು ಗೀತ ನನ್ನ ಮೆಚ್ಚಿನ ಮಡದಿಯಾಗಿ ಕಛೇರಿಯಲ್ಲಿ ಪ್ರೈವೇಟ್ ಸೆಕ್ರೆಟರಿಯಾಗಿದ್ದಾಳೆ !

—ಬಿ. ಎಸ್. ನರಹರಿರಾವ್



ಹಿಂದಿ ತರಹಾನೇ ಕಣೋ, ನಾನು ನಿನ್ನ ಹೊತ್ತುಕೊಂಡಿಲ್ಲ ಆದರೆ ನೀನು ನನ್ನ ಹೊತ್ತು ಕೊಂಡಿದಿ ! ಅಷ್ಟೆ !

ಕುರಿಹಟ್ಟಿ ಬಸವನಗೌಡ್ಯಾನು ನಡದುಬಂದ ದಾರಿ

"ಗೃಹ ತಟಾಕ ನಿರ್ಮಾಪಕೋ ಭವತಿ...ಪರಂತು..." ಅಂದರು. ಅಂದು ತಡವರಿಸಿದರು ಜಗಲಿ ಭೀಮಸೇನರು. ಜಗಲಿ ಭೀಮಸೇನರೆಂದರೆ ಕೊಳ್ಳೇಗಾಲದ ಜೋತಿಷ್ಯಕೇಸರಿ. ಮನೆ ಜಗಲಿಯಮೇಲೆ ಕುಳಿತು ಕವಡೆಹಾಕಿ ಜೋಸ್ಯ ಹೇಳುವ ಪದ್ಧತಿ ಅವರದು.

ಬಸವನಗೌಡ್ಯಾನಿಗೆ ಜೋತಿಷ್ಯಕ್ಕಿಂತ ಜೋಸ್ಯರಲ್ಲೇ ಹೆಚ್ಚು ನಂಬಿಕೆ. ಚಿಕ್ಕಂದಿನಿಂದಲೂ ಆತ ಮನೆ ಎಮ್ಮೆ ಕಾಣದೇ ಹೋಗಲಿ, ಆಕಳು ಮೈಸರಿಯಿಲ್ಲದೇ ಮಲಗಲೀ ಭೀಮಸೇನರ ಒಂದು ಮಾತು, ಒಂದು ಮಂತ್ರ ಪ್ರಭಾವವನ್ನು ಕಂಡರಿತಿದ್ದ. ಊರೆಲ್ಲಾ ಹುಡುಕಿದರೂ ಕಾಣದ ಎಮ್ಮೆ ಜಗಲೀ ಭೀಮಸೇನರ ಹುಂ, ಹ್ರೂಂ ಎಂದರೆ ಒಯ್ ಎನ್ನುತ್ತಾ ಓಡಿಬರುವುದು. ಅಂತಹ ಅದ್ಭುತ ಶಕ್ತಿಯನ್ನು ಕರಗತ ಮಾಡಿಕೊಂಡಿದ್ದ ಜೋತಿಷ್ಯಕೇಸರಿ ಜಗಲಿ ಭೀಮಸೇನರು ಬಸವನ ಗೌಡ್ಯಾನ ಎಳೆ ಮನಸ್ಸಿನಮೇಲೆ ಬಲವಾದ ಪ್ರಭಾವ ಬೀರಿದ್ದರು. ಮ್ಯಾಟ್ರಿಕ್ ಪರೀಕ್ಷೆಗೆ ಕವಡೆ ಹಾಕಿ ಕಟ್ಟು ಎಂದವರು ಅವರೇ. ಪರೀಕ್ಷೆಗೆ ಮೊದಲೇ ಜ.ಗ.ಭೀ ಉವಾಚ, ಪ್ರಶ್ನ ಪತ್ರಿಕೆ ನೂರುಸಲ ಬದಲಾಗಲಿ, ಮೂರೇ ಪ್ರಶ್ನೆಗಳಿಗೆ ಉತ್ತರಿಸಲಿ ಏನಂತೆ ?!

ಹಂಪಾಪುರದ ಒಂದು ಚೀಲ ಹೊಸ ಅವರೇಕಾಯಿ, ಎರಡು ಜಲ್ಲೆ ಪಟಾವಳೀ ಕಬ್ಬು, ಒಂದು ಬುಟ್ಟಿ ತುಂಬ ಸೊಪ್ಪಿಗೆ ಸೊಪ್ಪು, ದಂಟು, ಕರ್‍ಬೂಜಗಳೊಡನೆ ಬಂದ ಬಸವನ ಗೌಡ್ಯಾ ಭೀಮಸೇನರಿಗೆ ಸಾಷ್ಟಾಂಗ ನಮಸ್ಕಾರಮಾಡಿದ. ಎಲ್ಲವನ್ನೂ ನಡವೆಯಲ್ಲಿ ಇಡಿಸಿ ಶುಭಮಸ್ತು ಅಂದರು ಕೈಯಲ್ಲಿ ಕವಡೆಗಳನ್ನು ಕುಲುಕುತ್ತಾ ಭೀಮಸೇನರು.

"ಮುಂದೆ..." ಅಂದವನು ಬಸವನ ಗೌಡ್ಯಾ.

ಜಗಲೀ ಭೀಮಸೇನರು ಕುಲುಕುತ್ತಿದ್ದ ಕವಡೆಗಳನ್ನು ಸರಕ್ಕನೆ ನೆಲದಮೇಲೆ ಬಿಟ್ಟರು. ಎರಡು, ಮೂರು ಎಂದು ಅದೇನೇನೋ ಲೆಕ್ಕ ಹಾಕಿದರು. ತುಟಿ ಕಚ್ಚಿದರು. ಮುಖ ಸಿಂಡರಿಸಿದರು. ಅವರ ಮೊಗದಲ್ಲಿ ಆಗುತ್ತಿದ್ದ ಸಕಲ ವಿಕಾರಗಳೂ ಬಸವನ ಗೌಡ್ಯಾನ ಮೇಲೆ ವಿಚಿತ್ರ ಪ್ರಭಾವವನ್ನು ಬೀರುತ್ತಿದ್ದಿತು. ಅವರು ಅಂದದ್ದು ಆತನಿಗೆ ವೇದವಾಕ್ಯ. ಅಸ್ತು ಅಂದರೆ ಆಯಿತು. ಅ...ಹುಂ... ಎಂದರೆ ಮುಗಿಯಿತು ! ಸೃಷ್ಟಿಸಿದ ಬೊಮ್ಮನಿಗಿಂತಲೂ ಮಿಗಿಲು. ಕವಡೇ ಜೋಸ್ಯರ ಮಾತೇ ಬಸವನಗೌಡ್ಯಾನ ಭವಿಷ್ಯವನ್ನು ನಿರ್ಧರಿಸುತಿತ್ತು.

ಕ್ರಮೇಣ ಭೀಮಸೇನರ ಗಂಟುಮೊಗದಲ್ಲಿ ಹಸನು ರೇಖೆಗಳು ಉದಿಸಿದವು. ಬಸವನಗೌಡ್ಯಾನಿಂದ ನಿಟ್ಟುಸಿರು ಹೊರಹೊಮ್ಮಿತು.

'ಗೃಹ ತಟಾಕ ನಿರ್ಮಾಪಕೋ ಭವತಿ, ಪರಂತು...' ಎಂದು ತಡವರಿಸಿದರು ಜಗಲೀ ಭೀಮಸೇನರು.

"..."

"ಮನೆ, ಕೊಳ, ಕಟ್ಟಿ ಕಟ್ಟಿಸ್ತೀಯೋ, ಕೆರೆ, ಕುಂಟೆ, ಬಾವಿ, ಗೀವಿ ತೋಡಿಸ್ತೀಯೋ ಪರಂತು...ಆದರೆ"

"ಆದರೆ.."

"ಇನ್ನೇನೋ...ಸಿವಿಲ್ ಇಂಜನಿಯರಾಗ್ತೀಯೋ! ಈ ಕಾಲದಲ್ಲಿ ಇಂಜನಿಯರಿಂಗ್ ಸೀಟೂಂತ ಕೋರ್ಟು ಕಛೇರಿ ಎಲ್ಲ ಜನ ಅಲೀತಾರೆ. ಫೂಟ್‌ಲಾಯರಿಯಿಂದ ಶುರುವಾಗಿ ಸುಪ್ರೀಂಕೋರ್ಟು ಸಾಲಿಸಿಟರ್ ವರ್‍ಗೆ ತೆತ್ತಬೇಕೋ! ಅಂಥದು... ಅಷ್ಟು ಕಷ್ಟಪಟ್ಟು ಮುಂದೆ ಅದೇನೋ ಸಾಬ್ಯಾಗ ಅಂತಾರಲ್ಲ...ಅಂಥಾದು... ಅರ್ಥಾತ್ ನಿನಗೆ ಇಂಜನಿಯರಿಂಗ್ ಸೀಟು ಖಾತ್ರಿಯೇಪರಂತು..."ಎಂದು ಮತ್ತೆ ತಡವರಿಸಿದರು ಜಗಲಿ ಭೀಮಸೇನರು.

"ಪರಂತು ?!..." ವ್ಯಾಕುಲನಾಗಿ ಬಸವನಗೌಡ್ಯಾ

"ಪರಂತು ವಿದ್ಯಾ ತಥಾತಥಾ ವಿಘ್ನಂ ಭವತಿ!"

ಇನ್ನೊಂದು ಸಲ ಕವಡೆ ಹಾಕಿ ಗುಣಿಸಿ ಭಾಗಿಸಿ ಜಗಲಿ ಭೀಮಸೇನರು ಹೇಳೇ ಬಿಟ್ಟರು.

ಬಸವನಗೌಡ್ಯಾ ತತ್‌ಕ್ಷಣ ಅಲ್ಲೇ ನಿಶ್ಚೇಷ್ಟಿತನಾಗಿ ನಿಂತುಬಿಟ್ಟ. ಜಗಲೀ ಭೀಮಸೇನರು "ಅಲ್ಲೋ ಬಸವನಗೌಡ್ಯಾ, ತಥಾತಥಾ ಅಂದರೆ ನಾವು ಯಥಾನುಶಕ್ತಿ ಪರಿಹಾರ–ಶಾಂತಿ ಗೀಂತಿ ಮಾಡಿಸಬೋದೋ. ವಾರಿ ಜಾಸನೇ ಸಕಲ ಶಾಸ್ತ್ರ ದುದ್ಭವೇಂತ ಕುಮಾರವ್ಯಾಸ ಹೇಳಿದಾನಲ್ಲ, ಅದನ್ನ ಪ್ರತಿನಿತ್ಯ ಪಠಿಸೋ ಸರಸ್ವತಿ ನಿನ್ನ ಇಷ್ಟದೇವತೆಯಾಗಿ ಒಲೀತಾಳೋ. ಬೇಗ ಕೆರೆ ಕುಂಟೆ ತೆಗೆಸೋ ಭಾಗ್ಯ ಪಡೀತೀಯೋ. ಲಕ್ಷ್ಮೀ ಕೃಪೆ ಆಗುತ್ತೋ" ಅಂತ ಸಾಂತ್ವನಗೊಳಿಸಿ ಮನೆಗೆ ಕಳಿಸಿದರು ಅಮ್ಮನವರಿಗೆ ಅವರೇ ಹೇಳಿ, ಸೊಪ್ಪಿಗೆ ಸೊಪ್ಪು ಕೊಳಂಬು, ಮೆಂತ್ಯದ ಗೊಜ್ಜು ಎಂದು ಅಜ್ಞಾಪಿಸಿದರು.

ಸಮಾಜ ಸಮತಾವಾದಕ್ಕೆ ಮನ್ನಣೆ ನೀಡುತ್ತಿರುವ ಸರ್ಕಾರ ಪ್ರತಿಯೊಬ್ಬ ಮೂಲಭೂತ ಹಕ್ಕಿನತ್ತ ಗಮನ ಕೊಡುತ್ತಿದೆಯೇ ? Equality of opportunities ಎಂಬುದು ಸದ್ಯ ಇದೆಯೇ ? ತಾಂತ್ರಿಕ ವಿದ್ಯಾಭ್ಯಾಸದ ಸೀಟುಗಳ ಹಂಚಿಕೆಯಲ್ಲಿ ನ್ಯಾಯವಾದ ನಿಲುಗಡೆ ಇದೆಯೇ? ಆದಿಯಾಗಿ ಅಪೋಸಿಷನ್ ಬೊಬ್ಬೆಯಿ

ಡಲು ಮಾನ್ಯ ಮಂತ್ರಿಗಳೇ ಖುದ್ದಾಗಿ ಪರಿಶೀಲನೆ ನಡೆಸಲು ಇಂಟರ್‌ವ್ಯೂನಲ್ಲಿ ಉಪಸ್ಥಿತರಾಗಿದ್ದರು. ಅಂದೇ ಬಸವನಗೌಡ್ಯನ ಇಂಟರ್‌ವ್ಯೂ. ಅದೇನೇನೋ ಪ್ರಶ್ನೆಗಳು. ಉಷ್ಣಾಂಶ ಎಂದರೇನು ? ಜಡತ್ವ, ಚಲನ ನಿಯಮ, ಭಾರಮಾಪಕ... ಅಬಬ!...ಮಂತ್ರಿಗಳಿಗೆ ತಲೆ ಭಾರವಾಯಿತು. ಬೋರೋಬೋರು. ಸಾಕಪ್ಪಾ ಸಾಕು ಇಂಟರ್‌ವ್ಯೂ ಅಂತ ಬೆವರೊರೆಸಿಕೊಂಡರು. ಕೈವಾಚಿನತ್ತ ದೃಷ್ಟಿ ಬೀರಿದರು. ಅದೀಗ ಬಸವನಗೌಡ್ಯನು ಇಂಟರ್‌ವ್ಯೂ ಕೋಣೆಯೊಳಕ್ಕೆ ಕಾಲಿರಿಸಿದ. ಒಳಬಂದು ಕೈ ಜೋಡಿಸಿದ, ಮಂತ್ರಿಗಳತ್ತ ತಿರುಗಿ ಕೈ ಜೋಡಿಸಿ, ಶಿರಬಾಗಿಸಿ ಮುಗಳ್ನಗೆ ಮಿಂಚಿಸಿದ, ಮಂತ್ರಿಗಳು ಖುಶಿಬಿದ್ದರು, ಚಲೋ ಹುಡುಗ, ಚಲೋ ಗುಣ ಅಂದುಕೊಂಡರು.

"ಯಾವೂರಪ್ಪಾ, ಮಗೂ...ನಿಂದೂ" ಅಂದರು

"ಕೊಳ್ಳೇಗಾಲ..."

"ಓಹೋ!...ಕೊಳ್ಳೇಗಾಲದವನೇನೋ ನೀನೂ...ದೊಡ್ಡಟ್ಟಿ ದಮಾಸೆಯವರ ಊರ ಹೈದನಾ ?...ದಮಾಶೆಯುವರು ಹೇಗಿಧಾರೆ ? ಪಟೇಲ್ ಪಂಚಾಕ್ಷರಯ್ಯನವರು ಪಂಚರ ಬಸಾರಿ ಎಲ್ಲಾ ಚೆನ್ನಾಗಿಧಾರ ? ಮಣೇಗಾರ .." ಎಂದು ಮುಂದುವರಿಸುತ್ತಿರುವಲ್ಲೇ ಮುಖ್ಯ ಪರೀಕ್ಷಕರು, ಪ್ರೊಫೆಸರ್ ಸಿವ್ಹಿಲ್ ಇಂಜಿನಿಯರರು ಕೆಮ್ಮಿದರು, ಮಂತ್ರಿಗಳು ಸರಕ್ಕನೆ ಸುಮ್ಮನಾಗಿ ಮುಖವನ್ನು ಸಿಂಡರಿಸಿಕೊಂಡರು.

"ಕೊಳ್ಳೇಗಾಲದಲ್ಲಿ ಯಾವ ನದಿ ಹರಿಯುತ್ತೆ ?" ಎಂದರು ಮುಖ್ಯ ಪರೀಕ್ಷಕರು.

"ಕಾವೇರೀ..."

"ಕಾವೇರಿ ನೀರಿನ ಪರ್‌ಸೆಂಟೇಜ್ ಆಫ್ ಯುಟಿಲಿಟಿ...ಬಳಕೆ ಎಷ್ಟು ?"

"Nil...ಸರ್!"

"ವ್ಹೈ ?!...!"

"Sir, ಈಗ ಊರು ಇರೋವಲ್ಲಿ ಕಾವೇರಿ ಇದ್ರು, ಕಾವೇರಿ ಇರೋವಲ್ಲಿ ಊರು ಇದ್ದಿದ್ದರೆ ಬಳಕೆಯ ಪ್ರಶ್ನೆ. ಸದ್ಯ ಊರ ಕೆರೆ ಕಾಲುವೆ ನೀರು ಕಾವೇರಿಗೆ ಹೋಗುತ್ತೆ...ಅಷ್ಟೆ!"

(ಮಂತ್ರಿಗಳು ಗೊಳ್ಳನೆ ನಕ್ಕರು)

"Gosh!...with such a big river as Kaveri!... Water is left unused...is it!...?!..." ಎಂದರು ಪ್ರೊಫೆಸರ್ ಸಿವ್ಹಿಲ್ ಇಂಜನಿಯುರರು.

" No...Sir,...ಕಾವೇರಿ ಪವಿತ್ರವಾದ ನದಿ ಸಾರ್, ಕಾಶಿಯಲ್ಲಿ ಗಂಗೆ ಹೇಗೋ...ಕೊಳ್ಳೇಗಾಲಕ್ಕೆ ಕಾವೇರಿ ಸರ್...ತುಲಾ ಸಂಕ್ರಮಣ ಸ್ನಾನ...ಮತ್ತು ...ಮತ್ತು ಸತ್ತವರನ್ನು ಸುಡಲಿಕ್ಕೆ..."

(ಮಂತ್ರಿಗಳು ಬಿದ್ದು ಬಿದ್ದು ನಕ್ಕರು)

ಪ್ರೊಫೆಸರರು ಸ್ವಲ್ಪ ಸೀರಿಯಸ್ ಆದರು. ಪ್ರಶ್ನೆಗಳನ್ನು ಬೇರೆ ಕಡೆ ತಿರುಗಿಸಿದರು.

" D. V. G. ಅಂದರೇನು ? ಕೇಳಿಧೀಯಾ ? "

" D. V. ಗುಂಡಪ್ಪ !...ಕೇಳೋದೇನ್ ಸಾರ್ ... ಅವರ ಕವಿತೆಗಳನ್ನು ಓದಿಯೂ ಇದೇನೆ...ವನಸುಮದಲ್ಲಿನ್ನ ಜೀವನವು, ಮಂಕುತಿಂಮನ..."

" Very Good ... ಭೇಷ್ ... ಕನ್ನಡಾಂದರೆ ನಿನಗೆ ಬಲು ಇಷ್ಟಾಂತ ಕಾಣತ್ತೆ " ಅಂದರು ಮಂತ್ರಿಗಳು.

" You can go ! " ಎಂದು ಪ್ರೊಫೆಸರರು ಬಸವನ ಗೌಡ್ಯಾನನ್ನು ಹೊರ ಕಳುಹಿಸಿ ಮಂತ್ರಿಗಳತ್ತ ತಿರುಗಿ " He has got a very poor knowledge of the Engineering activities going on in India ! ...ದಾಮೋದರ್ ವೇಲಿ ಜನರೇಶನ್‌ಗೆ ಡಿ. ವಿ. ಗುಂಡಪ್ಪಾ ಅಂತಾನೆ..."

" ಅಯ್ಯೋ...ಅರೀದ ಹುಡ್ಗ...ಚಿಕ್ಕವನು...ಅವನಿಗೆ ದಾಮೋದರನ ಜನರೇಶನ್ ಹೇಗೆ ಗೊತ್ತಾಗಬೇಕು ? ಹುಡ್ಗ ಚೂಟಿಯಿಧಾನೆ, Seems to be intelligent ... ಯಾವ ತರ Face ಮಾಡ್ತಾನೆ Problems ನ ! ಅವನಿಗೊಂದು ಸೀಟು ಕೊಟ್ಬಿಡಿ ! " ಅಂದರು ಮಂತ್ರಿಗಳು.

" Sir, ... Percentage of marks is far below the average !..."

" Dont worry about all those things. Give preference to talent. Any fool can score marks...ಉರು ಹೊಡ್ದು...He is from Kollegal...ಕನ್ನಡಾಂದರೆ, ಕಾವೇರೀ ಅಂದರೆ, ಗುಂಡಪ್ಪನವರೂಂದರೆ ಭಕ್ತಿ ಇದೆ. ಕನ್ನಡನಾಡಿಗೆ ಹೊಸದಾಗಿ ಸೇರಿದ ಊರು ಕೊಳ್ಳೇಗಾಲ... Reserve few seats to candidates coming from Nava Karnatak and give one to ಬಸವನ ಗೌಡ್ಯಾ..." ಅಂತ ಹೇಳಿ ಮುಂದಿನದು ನೀವು ನಡೆಸಿ, ನನಗೆ ತುರ್ತು ಕೆಲಸ ಇದೆ ಅಂತ ಹೊರಟು ಹೋದರು.

ಜಗಲೀ ಭೀಮಸೇನರ ಕೈಯಲ್ಲಿನ ಕವಡೆಗಳು ಕುಲುಕುಲು ನಗುತ್ತಿದ್ದವು.

* * * *

ಜಗಲೀ ಭೀಮಸೇನರ ಕವಡೆ ಪ್ರಭಾವ ಕೊಳ್ಳೇಗಾಲದ ಕುರಿಹಟ್ಟಿ ಬಸವನ ಗೌಡ್ಯಾ ಇಂಜನಿಯರಿಂಗ್ ಕಾಲೇಜು ಮೆಟ್ಟಲು ಹತ್ತುವಂತೆ ಆಯಿತು. ಸೀಟು ಸಿಕ್ಕುವುದಕ್ಕೇ ಸುಪ್ರೀಂ ಕೋರ್ಟ್ ಹತ್ತಿದವರುಂಟು. (ಬಸವನ ಗೌಡ್ಯಾನ ಸೀಟಿಗೆ, ಅರ್ಹತೆಗೆ ಪ್ರಶ್ನೆ ಹಾಕಿ ಸುಪ್ರೀಂ ಕೋರ್ಟಿಗೆ ಕೆಲವರು ಹೋದದ್ದು ಬೇರೆ ವಿಷಯ) ಅದು ಸ್ವಲ್ಪವೂ ಶ್ರಮವಿಲ್ಲದೆ ಬಸವನ ಗೌಡ್ಯಾನಿಗೆ ಸಿದ್ಧಿಸಿತು. ಆದರೆ ಇಂಜನಿಯರಿಂಗ್ ಸೀಟೇ ಇಂಜನಿಯರಿಂಗ್ ಡಿಗ್ರಿ ಅಲ್ಲವಲ್ಲ! ಪಾಠಗಳು ಗೌಡ್ಯಾನಿಗೆ ಸಾಕುಸಾಕೆನಿಸಿದವು. ಇಂಜನಿಯರಿಂಗ್ ಅಂದರೆ ಅವನ ಪೂರ್ವಕಲ್ಪಿತ ಊಹಾಪೋಹಗಳೆಲ್ಲ ಬರೀ ಪೊಳ್ಳೆನಿಸಿದವು. ಎಂಥದೂ ಈ ಹಾಳು ಇಂಜನಿಯರಿಂಗು?! ಇಟ್ಟಿಗೆ, ಕಲ್ಲು, ಹೆಂಚು, ಬಂಬು...ಬಿಲ್ಡಿಂಗ್ ಮೆಟೀರಿಯಲ್ಸ್ ಅಂದರೆ ಗೌಡ್ಯಾನಿಗೆ ಆಕಳಿಕೆ ಬರುತಿತ್ತು Applied Mechanics ತಲೆ ತಿನ್ನುತಿತ್ತು. Drawing Class ಅಂದರೆ ನಡುನೋವು. ಪರಿಣಾಮವಾಗಿ ಗೌಡ್ಯಾನಲ್ಲಿ ಒಂದು ಬಗೆಯ ವೈಚಾರಿಕ ಆಂದೋಲನ ವೇರ್ಪಟ್ಟಿತು. ಮೆದುಳಿನಲ್ಲಿ Turbulence ಹೃದಯದಲ್ಲಿ whirlpool ಫಲಸ್ವರೂಪ ನವ್ಯ ಕಾವ್ಯವಾಗಿ ಹರಿಯಿತು. ಪಾಠಗಳನ್ನು ಪ್ರೊಫೆಸರರು ಮಾಡುತ್ತಿದ್ದರು. ತೂಕಡಿಕೆ ಬರದಿದ್ದರೆ ಬಸವನಗೌಡ್ಯಾನು ಕವಿತೆಗಳನ್ನು ಬರೆಯುತ್ತಿದ್ದನು. ಉದಾಹರಣೆಗಾಗಿ : ಬಿಲ್ಡಿಂಗ್ ಮೆಟೀರಿಯಲ್ಸ್ ಗೌಡ್ಯಾನ ದೇಹಪೂರ ಉರಿ ಎಬ್ಬಿಸುತಿತ್ತು. ಪ್ರೊಫೆಸರರೋ ಒಂದು ಕ್ಷಣವೂ ಬಿಡದೆ ಪಿರಿಯಡ್ಡು ಪೂರ ಬೋರ್ಡಿನ ಮೇಲೆ ಇಟಿ ಗೆ, ಹೆಂಚು ಎಂದು ಗೀಚುತ್ತಾ ಇರುತ್ತಿದ್ದರು. ಬಸವನ ಗೌಡ್ಯಾ ಇದನ್ನು ಈ ಕಿರು ಪ್ರತಿಮೆಯಲ್ಲಿ ಈ ರೀತಿ ಅಭಿವ್ಯಕ್ತಿಸಿದ್ದಾನೆ.

" ಪಾಪವೇನು ? ಪುಣ್ಯವೇನು ?...ನನಗೇನು ಗೊತ್ತಪ್ಪ ?!
ಅಂತು, ಪಿರಿಯಡ್ಡಿಗೆ ಮೂವತ್ತು ಚಾಕ್ಪೀಸಗಳನ್ನುಜ್ಜುವ ಈ–ದೇಶಿಕಪ್ಪ.
ಅದನಳಿಸಲು ಆ ಭಗವಂತನೇ ಬರಬೇಕಪ್ಪ.
ಎಂದು ಹೇಳಿದನಾದಪ್ಪ.

(ದೇಶಿಕಪ್ಪ ಪ್ರೊಫೆಸರು, ಆದಪ್ಪ ಅಟೆಂಡರು)

ವರ್ಷಪೂರ ಕ್ಲಾಸಿಗೆ ಚಕ್ಕರ್ ಹೊಡೆದು ಬಲ್ಲಾಳನ ಹೊಟೇಲಿನಲ್ಲಿ ದೋಸೆ ಹೊಡೆದು ಕೊನೆಗೆ ಪ್ರೊಫೆಸರರು ಅಟೆಂಡೆನ್ಸ್ No ! ಅಂದಾಗ ಪೆಚ್ಚು ಬಡಿದು ದಿಕ್ಕು ತೋಚದಿರುವಾಗ ಕುರಿಹಟ್ಟಿ ಬಸವನ ಗೌಡ್ಯಾ ಈ ರೀತಿ ಗೀಚುತ್ತಾನೆ.

ದಿಟ !...ಒಂದಿನಿತು ಕಾಫಿಯನು ಹೆಚ್ಚಾಗಿ ಕೊಟ್ಟರೆ
ಬಲ್ಲಾಳನಿಗೆ ಒಂದಾಣೆಯು ಹೋಯ್ತು !
ಅಟೆಂಡೆನ್ಸ್ ತಾ ಕ್ಲಾಸ್ ಮಾರ್ಕ್ಸ್‌ನು ಕೊಟ್ಟರೆ
ಈ ದೇಶಿಕನಪ್ಪನ ಮನೆ ಗಂಟೇನ್ಹೋಯ್ತು ? !

ಹೀಗಾಗಿ ಜಗಲಿ ಭೀಮಸೇನರ ಎರಡನೆಯ ಅಂಬೋಣವು ಮೊದಲನೆಯ ವರ್ಷವೇ ಸಂಭವಿಸಿಬಿಟ್ಟಿತು. ವಿದ್ಯಾ ತಥಾ ತಥಾ ವಿಘ್ನಂ ಭವತಿ ಎಂಬಂತೆ ಮೊದಲ ಸಲ ಅಟೆಂಡೆನ್ಸ್ ಇಲ್ಲದೆ ಪರೀಕ್ಷೆಗೆ ಕೂಡ್ರಿಸದಿದ್ದರೆ ಮುಂದಿನ ಎರಡು ಸಲ ಪರೀಕ್ಷೆಗೆ ಕೂಡಿಯೂ ಫಲಿತಾಂಶ ಸೊನ್ನೆಯಾಯಿತು. ಬಸವನ ಗೌಡ್ಯಾ ಮಾರ್ಚ್ ಸೆಪ್ಟೆಂಬರ್ ಹೀರೋ ಆದ. ಆದರೂ ಆತ ಧೃತಿಗೆಡಲಿಲ್ಲ. "ತಟಾಕ ನಿರ್ಮಾಪಕೋ ಭವತೀ" ಅಂತ ಜಗಲೀ ಭೀಮಸೇನರೆಂದ ಮೇಲೆ ಆಗಿಹೋಯಿತು. ಆಗಿಯೇ ತೀರುವೆನೆಂಬುದು ಅವನ ಮತ.

* * * *

ಸದ್ಯ ನಾವು ಕೊಳ್ಳೇಗಾಲದ ಕುರಿಹಟ್ಟಿ ಬಸವನ ಗೌಡ್ಯಾನು ನಡೆದು ಬಂದ ದಾರಿಯ ಮುಖ್ಯ ಘಟ್ಟದ ವರೆಗೂ ಬಂದುಬಿಟ್ಟಿರುವೆವು. ಆ ದಾರಿಯು ಇಲ್ಲಿಯ ವರೆಗೂ ನೇರವಾಗಿ, ಸ್ಪಷ್ಟವಾಗಿ ನಮ್ಮ ಅರಿವಿಗೆ ಬಂದಿರುವುದು ಮತ್ತು ಇಲ್ಲಿ ಅರಿಯಲು ಸ್ವಲ್ಪ ತೊಡಕಾಗಿರುವುದು. ಅಂತೂ ನಮಗೆ ಸಾಧ್ಯವಾದಷ್ಟು ಸಂಗ್ರಹಿಸಿ ಹೇಳಿ ಈ ಲೇಖನದ ಪರಿಸಮಾಪ್ತಿ ಮಾಡಿಬಿಡುವೆವು.

"ಪರಂತು ವಿದ್ಯಾ ತಥಾ ತಥಾ ವಿಘ್ನಂ ಭವತಿ" ಎಂದು ಭವಿಷ್ಯವಾಣಿ ನುಡಿದು ಭೀಮಸೇನರು ಅದರ ಪರಿಹಾರಕ್ಕಾಗಿ ಸರಸ್ವತಿಯ ಒಲವನ್ನು ಸಂಪಾದಿಸಲು ಒಂದು ಸಂಜೀವಿನಿಯನ್ನು ಉಪದೇಶಿಸಿದ್ದರಲ್ಲವೇ ? ಬಸವನ ಗೌಡ್ಯಾನು ಅತಿ ನಿಷ್ಠೆಯಿಂದ ಅನವರತ ಸುಬಹ ಔರ್ ಶ್ಯಾಮ್ ಕುಮಾರವ್ಯಾಸನ ವಾರಿಜಾಸನೇ ಸಕಲ ಶಾಸ್ತ್ರ ವಿಚಾರದುದ್ಭವೇ...ಆದಿ ತನ್ಮಯನಾಗಿ ಪಠಿಸುತ್ತಿದ್ದನು. ಹೀಗೆ ಒಂದು ದಿನ ಅವನಿಗೆ ಜ್ಞಾನೋದಯವಾಯಿತು.

ಅಂದು ಬೆಳಗ್ಗೆ !...ಎರಡನೆಯ ಮಾರ್ಚಿಗೆ ಹಣಕಟ್ಟುವ ಬೆಳಗ್ಗೆ, ವಾರಿ ಜಾಸನೇ ಅನ್ನುತ್ತಾ ಸರಸ್ವತಿ ಇನ್ನೂ ಒಲಿಯಲಿಲ್ಲವಲ್ಲಾ ಎನ್ನುತ್ತಿರುವಾಗ ಲಕ್ಷ್ಮಿ ಒಲಿದಳು. ಅದೇನೋ ಒಂದು ತರಹ ದೇಹಪೂರ ವಿದ್ಯುತ್ಪ್ರವಾಹ ಹರಿದಂತೆ ಭಾಸವಾಯಿತು. ಒಂದು ಕ್ಷಣ. ಮರು ಕ್ಷಣದಲ್ಲಿ ಬಸವನ ಗೌಡ್ಯಾನಲ್ಲಿ ಒಂದು ವಿಚಿತ್ರ ಪರಿವರ್ತನೆಯಾಗಿದ್ದಿತು, "ಕುರಿತೋದದೆಯುಂ ಕೆರೆ ಕುಂಟೆ ಮೋಣ್ ಭವ್ಯ ಭವ್ಯ ಮಹಲುಗಳಂ ನಮ್ಮವರ್ ನಾಡರ್ಕರ್ ಕಟ್ಟಿದರ್. ತಾಜಮಹಲು, ಕುತಬಮಿನಾರು, ಟಿಪ್ಪುಸುಲ್ತಾನ ಪ್ಯಾಲೇಸು, ರೆಡ್ ಫೋರ್ಟು, ಬೇಲೂರು, ಹಳೇಬೀಡು ಮೋಣ್...ಇನ್ನೇನು ? ಇನ್ನೇನು ?" ಎಂಬಂತೆ ಅಶರೀರವಾಣಿಯೊಂದರ ಅಂಬೋಣ, ಬಸವನ ಗೌಡ್ಯಾನು ಎದ್ದನು. ಪರೀಕ್ಷೆಯ ಅರ್ಜಿಪತ್ರವನ್ನು ಹರಿದೆಸೆದನು. ಪುಸ್ತಕಗಳನ್ನು ಜೋಡಿಸಿ ಸೆಲ್ಫಿನಲ್ಲಿಟ್ಟನು. ಪೂರ್ವೀಕರಿಗೆ ಇಂಜಿನಿಯರಿಂಗ್ ಡಿಗ್ರಿ ಯಾರೂ ಕೊಡಲಿಲ್ಲ. ಅಂತಹುದರಲ್ಲಿ ಇಂದಿನವರು ಅಚ್ಚಾ ಎನ್ನುವ ಎನ್ನುವ ಅದ್ಭುತ ಪವಾಡಗಳನ್ನು ಅವರು ಮಾಡಿ ತೋರಿರುವರು.

ಕಾವೇರಿ ಪೂರದಿಂದ ಸುತ್ತಮುತ್ತಲ ಹಳ್ಳಿಗಳ ಸರ್ವನಾಶವಾಗಿ ನಿರಾಶ್ರಿತರಿಗೆ ವಸತಿ ನಿರ್ಮಾಣ ಕಾರ್ಯಕ್ಕೆ ಪಂಚಾಯಿತಿಯವರು ಟೆಂಡರ್ ಕರೆದಿದ್ದರು, ಅದು ಬಸವನ ಗೌಡ್ಯಾನಿಗೆ ದಕ್ಕಿತು. ನಂತರ ನಗರದಲ್ಲಿ ಮಂತ್ರಿಗಳ ಭೇಟಿಯಾಯಿತು. ಸಿಮೆಂಟು ಚೀಲಗಳು ಗೌಡ್ಯಾನ ಗೋಡೋನಿಗೆ ರಾಶಿ ರಾಶಿಯಾಗಿ ಬಂದು ಬಿದ್ದವು. ಮತ್ತೆ ಮಾಯವಾಗುತ್ತಿದ್ದವು. ಕಾಡುಗಳನ್ನು ಸೀಳಿಸಿ, ಬಾವಿಗಳನ್ನು ತೋಡಿಸಿ ...ಅಹ! ಕುರಿಹಟ್ಟಿ ಬಸವನ ಗೌಡ್ಯಾನ ಕಾರ್ಯಕಲಾಪಗಳನ್ನು ಈ ಬಡ ಲೇಖನಿ ಏನು ಬಣ್ಣಿಸುವುದು?...ದೊಡ್ಡ ಯೋಜನೆಗಳಲ್ಲಿ ಈತನದು ಮುಖ್ಯ ಪಾತ್ರ. ನೂರಾರು ಲಾರಿಗಳು ಇವನ ಮನೆಯ ಸುತ್ತ ಓಡಾಡಿದವು. ಇವನ ಜೊತೆ ಇಂಜನಿಯರಿಂಗ್ ನೇರಿ ಡಿಗ್ರಿ ಪಡೆದವರೆಲ್ಲಾ ಮೂಗಿನ ಮೇಲೆ ಬೆರಳಿಟ್ಟುಕೊಂಡರು—ಈತ ಮುಖ್ಯ ಮಂತ್ರಿಯವರ ಬಗಲಲಿ ಕೈಹಾಕಿ Spot Investigation ಗೆ ಬಂದಾಗ ಅವರೆಲ್ಲಾ ಸರ್ಕಾರಿ ನೌಕರರು. ನೂರಿನ್ನೂರರ ಸಿಬ್ಬಂದಿಗಳು.

ಕಂಟ್ರಾಕ್ಟರ್ ಕುರಿಹಟ್ಟಿ ಬಸವನ ಗೌಡ್ಯಾನರ ಅದ್ಭುತ ಗಾಧಾ ಮುಗಿಯುವಲ್ಲಿಗೆ, ಅಗೋ ನೋಡಿರಿ ಮರಳೀ ಗುಡ್ಡದ ಮೇಲಿಂದ—ದೂರದಲ್ಲಿ ಗುಡ್ಡದೆತ್ತರಕ್ಕೆ ಬೆಳೆದಿರುವ ಭವ್ಯ ಭವನವೊಂದುಂಟಲ್ಲ! ಅದೇ ಬಸವನ ಗೌಡ್ಯಾನರ ನಿವಾಸ. ಗೃಹ ತಟಾಕ ನಿರ್ಮಾಪಕರಲ್ಲಿ ಅಗ್ರಗಣ್ಯರು! ಹದಿನೈದನೇ ಪಂಚವಾರ್ಷಿಕ ಯೋಜನೆಯಲ್ಲಿ ಕೊಳ್ಳೇಗಾಲದ ಕಾವೇರಿ ಯೋಜನೆ ಏನಾದರೂ ಸೇರಿದರೆ, ಕಾವೇರಿಯಿಂದ ಇವರ ಭವನಕ್ಕೆ ಕಾಲುವೆಯನ್ನು ತೋಡಿಸಿಯಾರು! ಮನೆಯ ಅವರಣದಲ್ಲೇ ಬೃಂದಾವನ ಗಾರ್ಡನ್ಸ್ ಕಟ್ಟ್ಯಾರು!

ಧನ್ಯ ಕಂಟ್ರಾಕ್ಟರ್ ಕುರಿಹಟ್ಟಿ ಬಸವನ ಗೌಡ್ಯಾ!

—ಕೊಳ್ಳೇಗಾಲದ್ನಾರಾಮಾನುಜ

ಡಾ॥ ನಾರ್ಲೀಕರ್ ಭಾಷಣಕ್ಕೆ ೪-೫ ಸಾವಿರ ಜನ ದೊಂಬಿ ಕೂಡಿದ್ದರು—

—ವಿಜ್ಞಾನದ ಮೇಲಿನ ಪ್ರೇಮದಿಂದಲ್ಲ!—ಯಶಸ್ಸಿನ ಮೇಲಿನ ಮೋಹದಿಂದ, ಅಷ್ಟೆ!

* * * *

ಲೋರಾ ಬ್ರಿಗೀಡಾ ಬಂದಿದಾಳೆ ಅಂತ ೧೦-೧೨ ಸಾವಿರ ಜನ ನೆರೆದಿದ್ದರು.

(ಪತ್ರಿಕೆ)

—ಕಲೆಯ ಮೇಲಿನ ಪ್ರೇಮದಿಂದಲ್ಲ!—ಯಶಸ್ಸಿನ ಮೇಲಿನ ಮೋಹದಿಂದ ಅಷ್ಟೆ!—

★ ★ ಸತ್ಯ ಹರಿಶ್ಚಂದ್ರ ★ ★

ದಫೇದಾರ್ ದೇರಣ್ಣನವರು ಡಂಗು ಬಡಿದು ಕೂತಿದ್ದರು. ಯಾರಾದರೂ ಆ ಕಥೆ ಕೇಳಿದ್ದರೆ ಹಾಗೇ ಕೂಡುತ್ತಿದ್ದರು. ಇದರಲ್ಲಿ ದಫೇದಾರ್ ದೇರಣ್ಣನವರ ತಪ್ಪು ಏನೇನೂ ಇರಲಿಲ್ಲ. ಎಲ್ಲಾ ಆ ಕಥೆ ಹೇಳುತ್ತಿದ್ದ ಕನ್ನೋಜಿಯ ಕಲಾವಂತ ರೀತಿಯೇ ದಫೇದಾರರೊಬ್ಬರನ್ನೇ ಅಲ್ಲ ಸುತ್ತಲೂ ಕೂತ ಎಂಟು ಮಂದಿ ಕಾನಿಸ್ಟೇಬಲ್ಲರೂ ಮೋಡಿಗೊಳಗಾದ ಮಂಗಗಳಂತೆ ಕೂತಿದ್ದರು.

ಅದು ಆದದ್ದು ಹೀಗೆ. ಎಂದೂ ಇಲ್ಲದ್ದು ದಫೇದಾರ್ ದೇರಣ್ಣನವರು ತಮ್ಮ ಸೌಭಾಗ್ಯವತಿ ಸಾವಂತ್ರಮ್ಮನವರು ಇನ್ನೂ ಬಾಗೂರಿನಲ್ಲೇ ಇದ್ದುದರಿಂದ ಬೇಸರದಿಂದ ಮಂಕುದಿಣ್ಣೆಯನ್ನೇರಿ ಆ ಹುಣ್ಣಿಮೆ ಚಂದ್ರನನ್ನು ನೋಡುತ್ತಿದ್ದರು. ತಮ್ಮ ಸುಂದರ ಅರ್ಧಾಂಗಿಯ ಮುಖ ನೋಡಬೇಕೆಂದೆನಿಸಿದಾಗಲೆಲ್ಲ, ಹುಣ್ಣಿಮೆಗಾಗಿ ಕಾದಿದ್ದು ಊರ ಹೊರಗಿನ ಮಂಕು ದಿಣ್ಣೆ ಎಂಬ ಮಣ್ಣುಗುಡ್ಡದ ತುದಿಗೆ ಕೂತು, ಪೂರ್ಣ ಚಂದ್ರನನ್ನು ನೋಡಿ ತೃಪ್ತಿಪಟ್ಟುಕೊಳ್ಳುವರು.

ಮಧ್ಯೆಯಲ್ಲಿ ಅವರು ಆ ಪೂರ್ಣ ಚಂದ್ರನನ್ನು ನೋಡುತ್ತಾ ಆ ದಿಣ್ಣೆಯಮೇಲೆ ಕೂತಿದ್ದು, ಆ ಗುಡ್ಡಕ್ಕೆ ಮಂಕುದಿಣ್ಣೆ ಎಂಬ ಹೆಸರು ಬಂದಿದ್ದು ಈ ಮಹಾಶಯರಿಂದಲೇ ಇರಬಹುದೇ ? ಎಂಬ ಶಂಕೆ ಬರುತ್ತಿತ್ತು. ಡ್ರೆಸ್ಸಿನಲ್ಲಿಲ್ಲದ ಈತ ಯಾರೋ ಮಂಕು ನವ್ಯ ಕವಿ ಇರಬೇಕೆಂದು ಊಹಿಸಿ, ಅದೇ ದಿಣ್ಣೆಯ ಮೇಲೆ ಇವರ ಪಕ್ಕದಲ್ಲಿಯೇ ಬಂದು ಕೂತು ಅದೇ ಬಂಗಾರದ ತಟ್ಟೆಯಂತೆ ನೀಲಾಕಾಶದಲ್ಲಿ ತೇಲುತ್ತಿದ್ದುದಲ್ಲದೆ, ಹಾಲಿನಂತಹ ಬೆಳದಿಂಗಳನ್ನು ಚೆಲ್ಲಿದ್ದ ಚಂದ್ರಮನನ್ನು ನೋಡುತ್ತಾ ಕೂತಿದ್ದ ಚೋರ ಶಿಖಾಮಣಿ ಕನ್ನೋಜಿ.

ಕನ್ನೋಜಿ ಖಯಾಲಿ ಕಳ್ಳ, ಬೆಳದಿಂಗಳ ಸೊಗಸನ್ನು ಅನುಭವಿಸುವ ರಸವಂತಿಕೆಯೂ ಅವನಲ್ಲಿತ್ತು.

" ರಂಗೋಲಿ ಚೆಲ್ಲಿದ ಹಾಗೈತೆ ತಿಂಗಳ ಬೆಳಕು "

—ಎಂದಾಗ ಚಂದ್ರಮುಖಿ ಸಾವಿತ್ರಿಯೇ ಆ ಚಂದ್ರಮ ಎಂದು ಭ್ರಮಿಸಿ ಆಕಾಶದಲ್ಲಿ ಮೈಮರೆತ ದಫೇದಾರರು ಯಾರು ಮಾತಾಡಿ ತಪೋಭಂಗ ಮಾಡಿದವರು! ಎಂದು ಪಕ್ಕದಲ್ಲಿ ಕುಳಿತವರನ್ನು ಆಗ ನೋಡಿದರು. ಆಶ್ಚರ್ಯ–ಸಂತೋಷ–ಭಯ–ಬೆವರು-ಡರ್–ಎಲ್ಲವೂ ಬಂದಡರಿದವು. " ಕನ್ನೋಜಿ " ! ! ! ಚೋರಾಗ್ರೇಸರ ಕನ್ನೋಜಿ ಪಕ್ಕದಲ್ಲೇ ಕೂತುಕೊಂಡಿದ್ದಾನೆ !

ತಾವು ಮುಷ್ಟಿಯಲ್ಲಿರುವ ದಫೆದಾರ್ ದೇರಣ್ಣನವರೆಂಬುದು ತಿಳಿಯದೆ ಈ ಕಳ್ಳ ಕನ್ನೋಜಿ ಬಂದು ಪಕ್ಕದಲ್ಲೇ ಕೂತನೆ ? ಬೆಕ್ಕಿನ ಬೋನಿಗೆ ಇಲಿ ಬಂದು ಅಂದ ಚಂದ ನೋಡುವರೀತಿಯಲ್ಲಿ ಈ ಕನ್ನೋಜಿ ಪೋಲೀಸರ ಪಕ್ಕದಲ್ಲೇ ಬಂದು ಕೂತಿರುವನೆ ?

ಹಿಂದೊಮ್ಮೆ ಈ ಕನ್ನೋಜಿ ಪೋಲೀಸರಿಗೆ ಬಾಳೆಹಣ್ಣು ತಿನ್ನಿಸಿ "ಈ ಕನ್ನೋಜಿ ಕಳ್ಳ ಶಿಖಾಮಣಿಯನ್ನು ಹಿಡಿದ ಪೋಲೀಸನಿಗೇ ಸಾವಿರರೂಪಾಯಿ ಬಹುಮಾನ ಕನ್ನೋಜಿಯವರೇ ಕೊಡುವರು" ಎಂದು ಅವನ ಶಿಷ್ಯ ತುಕ್ಕೋಜಿ ಬಹಿರಂಗ ಪತ್ರಿಕೆ ಊರು ತುಂಬಾ ಹಂಚಿದ್ದ.

ಅಂತಹ ಕೇಡಿಗ ತಮ್ಮನ್ನೇ ಹಿಡಿದು ಬಂಧಿಸಲು ಬಂದು ಕೂತಿರಬಹುದೇ ಎಂಬ ಸಂದೇಹವೂ ದಫೇದಾರರಲ್ಲಿ ಬಂದು ಹೋಯಿತು.

"ನಾನೇಳಿದ್ದು ಕೇಳಿಸ್ಲಿಲ್ವಾ" ಅಂತಂದ ಕನ್ನೋಜಿ.

"ಆಂ... ಹುಂ ..ಹೌದು... ಬೆಳದಿಂಗಳೂ... ಹಾಲು ಚೆಲ್ಲಿದ ಹಾಗಿದೆ... ಗಟ್ಟಿ ಹಾಲು... ಸತ್ಯವಂತರು ನಮ್ಮ ದೇಶದಲ್ಲಿ ಇದ್ರಂತಲ್ಲ... ಹಳೇಕಾಲದಲ್ಲಿ ಹಾಲಿಗೆ ನೀರು ಸೇರಸ್ತಾ ಇರ್‍ಲಿಲ್ಲವಂತಲ್ಲಾ... ಆ ಕಾಲದ ಗಟ್ಟಿ ಎಮ್ಮೆ ಹಾಲು ಚೆಲ್ಲಿದಹಾಗಿದೆ..."

"ಹೌದು. . ಈ ಮುಂಕುದಿಣ್ಣೆ ಮ್ಯಾಲೆ ಕುಂತು ಈ ಚಂದ್ರಪ್ಪನ ತಿಂಗಳ ಬೆಳಕು ಸವಿಯಾಕೆ ಬಹು ಸೊಗಸ್ನ"

ಹೀಗೆನ್ನುತ್ತಾ ಹಾಗೇ ಅಲ್ಲೇ ಮಲಗಿ ಬೆಳದಿಂಗಳಲ್ಲಿ ಸೊಗಸಾಗಿ ಹಾಗೇ ಗೊರಕೆ ಯನ್ನು ಪ್ರಾರಂಭಿಸಿದ. ದಫೇದಾರರು... ಹಾಗೇ ತಮ್ಮ ಒಳ ಕಿಸೆಯಲ್ಲಿಂದ ಒಂದು ಸೀಸೆ ತೆಗೆದರು. ಪ್ಯಾಂಟಿನ ಜೇಬಿನಿಂದ ವಸ್ತ್ರ ತೆಗೆದರು. ಎರಡು ತೊಟ್ಟು ವಸ್ತ್ರಕ್ಕೆ ಬಿಟ್ಟುಕೊಂಡು ಹಾಗೇ ಆ ಕರವಸ್ತ್ರವನ್ನು ಕನ್ನೋಜಿಯ ಮೂಗಿಗೆ ಹಿಡಿದರು, ಅವನು ಮೂರ್ಛೆ ಹೋದ.

"ಜೈ ಕನ್ನೇಶ್ವರೀ"—ಎಂದು ಅನಾಮತ್ ಆ ಕಳ್ಳಬಡ್ಡೀ ಮಗನನ್ನು ಹೊತ್ತು ಹೆಗಲಿಗೇರಿಸಿ ಪ್ರಯಾಸದಿಂದ ಗುಡ್ಡ ಇಳಿದು ದಾರಿಯಲ್ಲಿ ಸಿಕ್ಕ ಗೊಬ್ಬರದ ಗಾಡಿಯಲ್ಲಿ ಹೇರಿಕೊಂಡು ಬಂದು ಸ್ಟೇಷನ್ನಿನ ಲಾಕಪ್ಪಿನಲ್ಲಿ ಮಲಗಿಸಿದರು.

ದಫೇದಾರರ ಧೈರ್ಯಕ್ಕೆ ಇಡೀ ಪೋಲೀಸ್ ಡಿಪಾರ್ಟ್‌ಮೆಂಟೇ ಅಚ್ಚರಿ ಪಟ್ಟಿತ್ತು. ಈ ಸಾಹಸಕ್ಕೆ ಖಂಡಿತ ದಫೇದಾರ್‌ಗಿರಿಯಿಂದ ಸಬ್ಬಿನಿಸ್ಪೆಕ್ಟರ್‌ಗಿರಿಗೆ ಏರಿಸಿಬಿಡುವರೆಂದು ಧಾರಾಳವಾಗಿ ಮಾತಾಡಿಕೊಂಡರು.

ಸ್ವಯಂ ಐ. ಜಿ. ಪಿ. ಗಳೇ ಬಂಗಾರದ ಪದಕಕ್ಕೆ ಶಿಫಾರ್ಸು ಮಾಡುವಂತಹ ಸಾಹಸ ಮಾಡಿಬಿಟ್ಟಿದ್ದರು, ದಫೇದಾರ್ ದೇರಣ್ಣನವರು. ಕಂಬಿಯ ಹಿಂದೆ ಲಾಕಪ್ಪಿನಲ್ಲಿ ಮಲಗಿದ ದೈತ್ಯ ಕನ್ನೋಜಿಯನ್ನು ನೋಡಿ ಸಮಯ ಸ್ಫೂರ್ತಿ ಬಂದು ಹ್ಯಾಗೆ ಈ

ಚೋರಶಿಖಾಮಣಿಯನ್ನು ಹಿಡಿದೆ ಎಂದು ಅವರಿಗೇ ಆಶ್ಚರ್ಯವಾಗುತ್ತಿತ್ತು. ಜಂಬ ದಿಂದ ಮೀಸೆಗೆ ಜೇನುಮೇಣ ಸವರಿಕೊಂಡು ಹುರಿ ಮಾಡುತ್ತಾ ಇಡೀ ಪೋಲೀಸ್ ಸ್ಟೇಷನ್ನಿನಲ್ಲೆಲ್ಲಾ ಗುಟುರು ಹಾಕಿ ಆರ್ಭಟಿಸುತ್ತಿದ್ದರು.

ಎಚ್ಚೆತ್ತ ಕನ್ನೋಜಿ ಕಟಾಂಜನದ ಸರಳುಗಳ ನಡುವೆ ಮುಖ ಇಟ್ಟುಕೊಂಡು "ಐ ಈವಯ್ಯನಿಗೆ ಯಾಮಾರಿಬಿಟ್ನೇ" ಎಂದು ಹ್ಯಾಗೆ ಅಲ್ಲಿಂದ ಪಾರಾಗುವುದೆಂದು ಉಪಾಯಗಳನ್ನು ಯೋಚಿಸುತ್ತಿದ್ದ.

*　　*　　*　　*

ರಾತ್ರಿ ಎಂಟು ಗಂಟೆ ಸಮಯ. ಎಂಟು ಜನ ಕಾನಿಸ್ಟೇಬಲ್ಲುಗಳು—ಸ್ವಯಂ ದಫೇದಾರರೂ ಚಕ್ಕಮಕ್ಕ ಹಾಕಿಕೊಂಡು ಇಕ್ಕಿದ ಲಾಕಪ್ಪಿನ ಬಾಗಿಲ ಮುಂದೆ ಭಕ್ತಿ ಯಿಂದ ಕೈ ಮುಗಿದು ಕೂತಿದ್ದರು.

ಕಿಲಾಡಿ ಕನ್ನೋಜಿ ಕಥೆ ಹೇಳುತ್ತಿದ್ದ. ಸತ್ಯ ಹರಿಶ್ಚಂದ್ರನ ಕಥೆಯನ್ನು ಬಹಳ ಸೊಗಸಾಗಿ ಹೇಳುತ್ತಿದ್ದ. ಹಿಂದೊಮ್ಮೆ ಈ ಭರತಖಂಡದಲ್ಲಿ ಸತ್ಯಕ್ಕಾಗಿ ಒಬ್ಬ ರಾಜ ಎಷ್ಟು ಕಷ್ಟಗಳನ್ನು ಅನುಭವಿಸಿದ ಅನ್ನುವ ಸತ್ಯ ಹರಿಶ್ಚಂದ್ರ ರಾಜನ ಕಥೆಯನ್ನು ಕನ್ನೋಜಿ ಹೇಳುತ್ತಿದ್ದ.

ಈ ಕಥೆ ಹೇಳುವ ಅವಕಾಶ ಅವನಿಗೆ ಅಕಸ್ಮಾತ್ ಸಿಕ್ಕಿತು. "ಸತ್ಯವಾಗ್ಲೂ ಕೊಂಚ ಹೊರಕ್ಕೆ ಬುಡಿ ಬಂದುಬಿಡ್ತಿನಿ"

"ಸತ್ಯ ಅರಿಶ್ಚಂದ್ರನ ಮೊಮ್ಮಗ ನೀನು! ಬಂದುಬಿಡ್ತಿಯ ನೋಡು..."

"ಔದು ದಪೇದಾರ್ರೇ...ನಮ್ಮ ಹಿರೇರು ಸತ್ಯ ಹರಿಶ್ಚಂದ್ರನ ಅರಮನೇಲಿ ಊಳಿಗದವರಾಗಿದ್ರಂತೆ..."

"ಹೌದಾ!"—ದಫೇದಾರರು ಕೇಳಿದ್ದರು.

"ನಾನು ಆ ವಂಶದವನು ಸುಳ್ಳು ಹೇಳೇನಾ... ನಮ್ಮ ದೇಶದಾಗೆ ಕಾಲದಿಂದ ಕಾಲಕ್ಕೆ ಜನಗೋಳು ಆಳೋ ರಾಜರುಗಳನ್ನ ಹಿಂಗೇ ಪರಿಕ್ಸೆ ಮಾಡಿ ಎಷ್ಟರಮಟ್ಟಿಗೆ ಇವರು ಸತ್ಯವಂತ್ರೂನ್ನೊದನ್ನ ಜಗತ್ತಿಗೇ ತೋರಿಸಿಕೊಟ್ಟಿದ್ದಾರೆ...ಎಲ್ಲಿ ರವಷ್ಟು ಬಾಗಿಲು ತಗಿ ಶಿವಾ ಹೊರಿಕೆ ಓಗಿ ಬಂದುಬುಡ್ತಿನಿ...ಬಾಳ ಅವಸರ ಆಗೋಗದೆ..."

—ಪಾಪ ಕಳ್ಳನಾದರೂ ಕನ್ನೋಜಿಗೆ ಸಹಜ ಮನುಷ್ಯ ಬಾಧೆಗಳಿಲ್ಲದೆ ಉಂಟೆ? ದಫೇದಾರ್ರು ಅವನಮೇಲೆ ಮರುಕಗೊಂಡು ಇಬ್ಬರು ಕಾನಿಸ್ಟೇಬಲುಗಳನ್ನು ಹಿಂದೆ ಬಿಟ್ಟು ಕಳಿಸಿದರು. ತಂಟೆ ತಕರಾರಿಲ್ಲದೆ ಹೊರಕ್ಕೆ ಹೋಗಿ ಜಲಬಾಧೆ ತೀರಿಸಿಕೊಂಡು ಸಭ್ಯನಂತೆ ಬಂದು ಲಾಕಪ್ಪಿನ ಒಳಗೆ ಹೋಗದೆ ಹೊಸಿಲಮೇಲೇ ಕುಳಿತ.

"ಇಸ್ವಾಮಿತ್ರ ವಸಿಷ್ಠರ ಜಗಳದಾಗೆ ನಮ್ಮ ಸತ್ಯ ಅರಿಚಂದ್ರ ಬಡವ ಆದ... ಕೇಳಿಲ್ವಾ ಗಾದೆ ಗಂಡ ಹೆಂಡ್ತಿ ಜಗಳದಾಗೆ ಕೂಸು ಬಡವ ಆಯ್ತು ಅಂತ!...ನಮ್ಮ ರಾಜ ಸತ್ಯವಂತ ಅಂತ ವಸಿಷ್ಠ...ಎಂಥವನೇ ಇರಲಿ ಅವನು ಅಪ್ಪಟ ಸತ್ಯವಂತ ಆಗೇ ಇರಾಕೆ ಅಸಾಧ್ಯ—ನಿಮ್ಮ ರಾಜನ ಪರೀಕ್ಷೆ ಮಾಡೋವ ಅಂತ ಅಂದ..."

"ಯಾರೂ..." ಕಾನಿಸ್ಟೇಬಲ್ ಪಕೀರಪ್ಪ ಕೇಳಿದ.

"ಇ...ಇಸ್ವಾಮಿತ್ರ...ಅದೂ ತಿಳಿಯಾಕಿಲ್ಲ...ಆವ್ಯಾಕೆ? ಮುಂದೇನು ಹೇಳು ಕನ್ನೋಜಿ..."

ಎಂದು ಕವಕ್ಕನೆ ಕಥೆಯ ನಡುವೆ ಬಾಯಿ ಹಾಕಿದ ಪಕೀರಪ್ಪನಮೇಲೆ ದಾಳಿ ಮಾಡಿದರು ದ॥ ದೇ. ಕನ್ನೋಜಿ ಲಾಕಪ್ಪಿನ ಹೊಸಲ ಮೇಲಿಂದ ಕೆಳಗಿಳಿದು ಕೊಂಚ ಮುಂದೆ ಬಂದು ಕೂತು ಹೇಳತೊಡಗಿದ.

"ಯಾವ ಕಾಲಕ್ಕೂ ರಾಜ್ಯ ಆಳೋ ರಾಜಕೀಯದವರ ಸತ್ಯ ಶಂಕೆಮಾಡಿಯೇ ಜನ ನೋಡ್ತಿದ್ದುದ್ದುಂಟು. ಅಂದ್ರೇ ಹಿಂದಿನ ಸತ್ಯ ಅರಿಚ್ಚಂದ್ರನಂತಾ ರಾಜರಿಗೂ ಈಗಿನ ಅರಿವಿಲ್ಲದ ಚಂದ್ರನಂತಾ ರಾಜರಿಗೆ ಭಾಳ ಯತ್ವಾಸ ಆದೆ. ಯಾಕೆಂತಿರೋ ಆಗಿನ ಕಾಲದಲ್ಲಿ ಸತ್ಯ ಪರೀಕ್ಷೆಗೆ ರಾಜರು ಒಪ್ಕೊತಿದ್ರು...ಈಗ ಜನಗಳು ಬೊಬ್ಬೆ ಇಟ್ರು ಅನ್ಯಾಯ ಆಗದೆ ಮುಡ್ನನ್ನೊ ಶರಾವತಿ ಜಲಪಾತದಂಗೆ ಹರಿದುಹೋಗಿ ಅನುಮಾನಾಸ್ಪದವಾದಕಡೆ ಬಂದು ನಿಂತು ಬಿಟ್ಟಿದೆ. ವಿಚಾರಣೆಮಾಡಿ ಅಂತ ಕೂಗಿದರೆ ...ಇಲ್ಲ ಇದು ರಾಮರಾಜ್ಯ, ರಾಮ ಬರೋವರ್ಗೂ ಭರತನ ಹಾಗೇ ಕಾದ ಶಿಷ್ಯ ಕೋಟಿ ಆದೆ ..ಇಲ್ಲಿ ಈ ರಾಜ್ಯದಲ್ಲಿ ನೆಡಿಯೋದೆಲ್ಲಾ ನ್ಯಾಯವೇ...ಆದ್ದರಿಂದ ಪರೀಕ್ಷೆ ಮಾಡೋ ಪ್ರಶ್ನೆ ಎಲ್ಲಿ ಬರ್ತದೆ? ಹಿಂಗದೆ ಈಗಿನ ರಾಜಕೀಯ...ಸೀತೇನ್ನ ಬೆಂಕೀಲಿ ಬಿಟ್ಟು ಪರೀಕ್ಷೆ ಮಾಡಿದ ಶ್ರೀರಾಮಚಂದ್ರನ ದೇಶ ಇದು. ಅನುಮಾನ ಬಂದಮೆ ಅಂದು ಕೂಗಾಡಿದಾಗ ವಿಚಾರಣೆ ಸಮಿತಿಗೆ ಯಾವನಾದರೂ ದಾಸಯ್ಯ ಬಂದು ಮಾಡ್ಲಿ ನಾವು ಕಿಲೀನ್ ಆಗಿದೇವಿ ಅಂತ ಧೈರ್ಯವಾಗಿ ಅಗ್ನಿ ಪರೀಕ್ಷೆ ಮಾಡ್ಕಳ್ಳಕೆ ಯಾಕೆ ಹೆದರಿಕೆ?"

"ಏಯ್ ಕನ್ನೋಜಿ ಸತ್ಯಹರಿಶ್ಚಂದ್ರ ಇಂಥಾದೇ ಅಪವಾದಕ್ಕೆ ಪೇಚಾಡ್ಕಂಡು ಹೆಂಡ್ರು ಮಕ್ಕಳನ್ನ ಮಾರಿಕೊಂಡು ಸ್ಮಶಾನಾ ಕಾಯೋಕೆ ಓದಾಂತ ಅಂತಿಯೊ?"

"ರಾಜ ಅವನು ಎಲ್ಲಾ ಪವರ್ರಿತ್ತು. ಈ ಬಡ ಹಾರುವಯ್ಯ ವಶಿಷ್ಠರ ಮಾತಿಗೂ ...ಕ್ಷತ್ರಿಯನಾದ್ರೂ ಹಾರವನೇ ಆಗಿ ಭಪ್ಪರೆ ಅನ್ನಿಸಿಕೊಂಡ ಇಸ್ವಾಮಿತ್ರನೂ ಹಾಕಿಕೊಂಡ ಸವಾಲಿಗೆ ಒಪ್ಪದೆ ಸುಖವಾಗಿ ರಾಜ್ಯಭಾರಮಾಡ್ಕೊಂಡು ಚಂದ್ರಮತಿ ಜತೆ ಇರಭೋದಿತ್ತು. ಆದರೆ ಅವನು ಸತ್ಯಕ್ಕೆ ಎದರಿದೋನೇ ಅಲ್ಲ...ಧೈರ್ಯವಾಗಿ ಪರೀಕ್ಸೆ ಮಾಡೂಂತ ಸೈ ಅಂತ ಅಂದ...ನಮ್ಮ ಹಿರಿಯ ಹರಿಶ್ಚಂದ್ರನ ರಾಜ್ಯದಾಗೇ ನಾವೂ ರಾಜಕೀಯ ಮಾಡ್ತಿದ್ದೀವಿಂದ್ರೆ ನಾಚಿಕೆ ಆಗ್ತದೆ, ತೆಗಿರಿ ದೇರಣ್ಣೋರೆ..."

" ಸತ್ಯ ಹರಿಶ್ಚಂದ್ರ ಕಡೆಗೆ ಸತ್ತುಹೋದ ಅಲ್ವಾ ?"

" ಸತ್ಯವಂತ್ರೆಲ್ಲಾ ಚಿರಂಜೀವಿಗಳೇ ಆಗಿದ್ದಿದ್ರೆ...ಈ ರಾಜ್ಯಭಾರ ಆಳೋಕೆ ಇವರುಗಳಿಗೆ ಅವಕಾಶ ಸಿಕ್ತಿತ್ತೆ ? ..ಕಾಡು ಮೇಡು ಅಲೆದು–ಕಾಶಿ ಬ್ರಾಹ್ಮಣನಿಗೆ ಹೆಂಡ್ತಿನ್ನ ಮಾರಿ—ಮಗ ಹಾವು ಕಡಿದು ಕಾಡಲ್ಲಿ ಸತ್ತು...ಅವನ್ನ ಸುಡಾಕೆ ಸ್ಮಶಾನಕ್ಕೆ ಪಾಪ ಆ ರಾಣಿ ಚಂದ್ರಮತಿ ಹೋದಾಗ—ಶಿವಶಿವ! ಅಂಥಾ ಕಷ್ಟ ಯಾರಿಗೂ ಬೇಡ. ಗಂಡ ಸ್ಮಶಾನ ಕಾಯೋನು ಮಗ ಸತ್ತ ಹೆಣ—ಹೆಂಡ್ತೀನೆ ಸುಡೋಕೆ ಬಂದಿರೋಳು ಹೆತ್ತ ಮಗನ್ನ...ಎಲ್ಲಾ ಸತ್ಯ ನಂಬಿದವನ ಪಾಡೂ ನೋಡಿ ದಫೇದಾರೆ..." ಸತ್ಯ ನಂಬಿದರೆ ಇಂಥಾ ಕಷ್ಟಗಳು ಬರ್ತಾವೇಂತ್ಲೆ ಈಗಿನ ರಾಜ್ಯ ಆಳೋರು ಅದನ್ನ ಬಿಟ್ಬಿರಬೇಕು" ಎಂದ ಫಕೀರಪ್ಪ.

" ಲೋ ಫಕೀರಾ...ನಮಗೆ ಸಂಬ್ಳಾ ಕೊಡೋ ದಣಿಗಳನ್ನ ಯಾವತ್ತೂ ಹಂಗನ್ನಬಾರ್ದು ಕಣಲೇ...ಆಮ್ಯಾಲೆ ಸತ್ಯ ಹರಿಶ್ಚಂದ್ರ ಏನಾದಾ?"—ಕನ್ನೋಜಿಯ ಕಥೆ ಸ್ವಾರಸ್ಯವಾಗಿತ್ತು. ಲಾಕಪ್ಪಿನಿಂದ ಇನ್ನೂ ಮುಂದೆ ಸರಿದು ಕುಳಿತು ಮಾತು ಪ್ರಾರಂಭಿಸಿದ.

" ಇನ್ನೇನು ಹೆಂಡ್ತಿ ಕುತ್ತಿಗೆ ಕಡಿಬೇಕು. ಆ ರೇಮಿಗೆ ಶಿವ ಪ್ರತ್ಯಕ್ಷ ಆದ .. ದೇವರೂಂದ್ರೆ ಶಿವಾ ದೇರಣ್ಣೋರೇ...ಅವನ್ನ ನಂಬಿದರೆ ಗ್ಯಾರಂಟಿ ಮುಕ್ತಿ... ಆ ಹ ಹ...ಇಂತಹ ಶಿವ ಪ್ರತ್ಯಕ್ಷ ಆದಾಗ...ಅವನ ಧ್ಯಾನಾ ಮಾಡಿದರೆ ಮಾಡಿದ ಪಾಪ ಹೊಯ್ತದೆ...ಎಲ್ಲ ಹೇಳಿ...ಓಂ ನಮ ಶಿವಾಯ ಶಿವಾಯ ನಮಹೋಂ. ."

ಕನ್ನೋಜಿ ಮಾತಿನ ಮೋಡಿ ಹಾಕಿ ದಫೆದಾರರಲ್ಲಿ ಭಕ್ತಿ ಹುಟ್ಟಿ ಕಾನಿಸ್ಟೆಬಲುಗಳ ಕೈಲಿ ಕೈಮುಗಿಸಿ ಕಣ್ಣು ಮುಚ್ಚಿಸಿ ಶಿವನ ಭಜನೆ ಮಾಡಿಸುತ್ತಾ ಹಾಗೇ ಎಲ್ಲರೂ ಕೈಮುಗಿದು ತದೇಕ ಚಿತ್ತರಾಗಿ ಕಣ್ಣುಮುಚ್ಚಿದಾಗ ಕನ್ನೋಜಿ ಕಳ್ಳಬದ್ದಿ ಹೈದ ಪೋಲೀಸ್‌ಸ್ಟೇಷನ್ನಿಂದ ಓಡಿಹೋದ. ಸತ್ಯಹರಿಶ್ಚಂದ್ರ ಮಹಾರಾಜನ ಕಥೆ ಈ ಕಳ್ಳ ನನ್ನು ವಿಮುಕ್ತನನ್ನಾಗಿ ಮಾಡಿತ್ತು. ದೇರಣ್ಣನವರು ಮಾತ್ರ ಇನ್ನೂ ದಫೆದಾರರಾಗೇ ಉಳಿದಿದ್ದಾರೆ.

— ದಾಶರಥಿ ದೀಕ್ಷಿತ್

———

Statement about ownership and other particulars about newspaper **KORAVANJI** to be published in the first issue every year after last day of February.

FORM IV (SEE RULE 8)

1.	Place of Publication	BANGALORE
2.	Periodicity of its publication	MONTHLY
3.	Printer's Name	SHRI B. SREENIVASA IYENGAR
	Nationality	INDIAN
	Address	COTTONPET, BANGALORE
4.	Publisher's Name	SHRI B. N. GUPTA
	Nationality	INDIAN
	Address	C/o KORAVANJI, BANGALORE-9.
5.	Editor's Name..	M. SIVARAM
	Nationality	INDIAN
	Address ..	PROPRIETOR, KORAVANJI, BANGALORE-9
6.	Names and address of individuals who own the newspapers and partners or shareholders holding more than one per cent of the total capital	M. SIVARAM Sole Proprietor KORAVANJI BANGALORE-9

I, **M. SIVARAM,** hereby declare that the particulars given above are true to the best of my knowledge and belief.

M. SIVARAM

Date 28—2—1965 *For Signature of Publisher*

Reg. No. B.G. 343 KORAVANJI March 1965

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್ ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

Printed by B S. Iyengar, Bangalore-2
Publisher—B. N. Gupta Editor—M. Shivaram